# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬**

**ದಿನಾಂಕ: 05.12.2022 ರಂದು ಬೆಳಿಗ್ಗೆ 11:30 ಗಂಟೆಗೆ** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 60ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿ.

| **ಉಪಸ್ಥಿತರು** | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಕರಾಮುವಿ, ಮೈಸೂರು. |
| **ಪ್ರೊ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ)<br>ಕರಾಮುವಿ, ಮೈಸೂರು | **ಡಾ. ಎ. ಖಾದರ್ ಪಾಷ**<br>ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು |
| **ಡಾ. ಕೆ.ಬಿ. ಪ್ರವೀಣ**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು. | **ಪ್ರೊ. ಎಂ. ರಾಮನಾಥಂ ನಾಯ್ಡು**<br>ಡೀನ್ (ಅಧ್ಯಯನ ಕೇಂದ್ರಗಳು),<br>ಕರಾಮುವಿ, ಮೈಸೂರು. |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್**<br>CIQA **ನಿರ್ದೇಶಕರು**<br>ಕರಾಮುವಿ, ಮೈಸೂರು. | **ಡಾ. ಮಹೇಶ ವಿ.**<br>**ವಿಶೇಷಾಧಿಕಾರಿ –** ಡೀನ್ (ಶೈಕ್ಷಣಿಕ)<br>ಕರಾಮುವಿ, ಮೈಸೂರು. |
| **ವಿವಿಧ ನಿಕಾಯಗಳ (ಸ್ಕೂಲ್) ಪ್ರಭಾರ ನಿರ್ದೇಶಕರು** | |
| **ಪ್ರೊ. ರಾಮನಾಥಮ್ ನಾಯ್ಡು ಎಂ.** | ಭಾಷಾ ನಿಕಾಯ |
| **ಡಾ. ಆರ್.ಹೆಚ್. ಪವಿತ್ರ** | ಸಮಾಜ ವಿಜ್ಞಾನ ನಿಕಾಯ |
| **ಡಾ. ಲಕ್ಷ್ಮೀ .ಎನ್** | ಶಿಕ್ಷಣ ನಿಕಾಯ |
| **ಡಾ. ಮಹೇಶ ವಿ.** | ವಾಣಿಜ್ಯ ನಿಕಾಯ |
| **ಡಾ. ಹೆಚ್. ರಾಜೇಶ್ವರಿ** | ನಿರ್ವಹಣಾಶಾಸ್ತ್ರ ನಿಕಾಯ |
| **ಡಾ. ನಿರಂಜನ್ ರಾಜ್ ಎಸ್.** | ವಿಜ್ಞಾನ ನಿಕಾಯ |

ಶೈಕ್ಷಣಿಕ ಮಂಡಳಿ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಮಾನ್ಯ ಕುಲಸಚಿವರು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಸಚಿವರು ಅಧ್ಯಕ್ಷರ ಸೂಚನೆಯಂತೆ 60ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು.

## ವಿಷಯ ಸಂಖ್ಯೆ: 60.01

ವಿಷಯ : ಕರಾಮುವಿ ನಿಲಯದಲ್ಲಿ 2001–02 ರಿಂದ 2014–15 ರವರೆಗೆ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದು ಪರೀಕ್ಷೆ ತೆಗೆದುಕೊಂಡಿಲ್ಲದ/ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅಂತಿಮ ಅವಕಾಶ ಮಾಡಿಕೊಡುವ ಬಗೆಗೆ.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2001–02 ರಿಂದ 2014–15 ರವರೆಗೆ ವಿವಿಧ ಸ್ನಾತಕ/ಸ್ನಾತಕೋತ್ತರ ಶಿಕ್ಷಣ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದು ಕಾರಣಾಂತರಗಳಿಂದ ಪರೀಕ್ಷೆ ತೆಗೆದುಕೊಂಡಿಲ್ಲದ ಹಾಗೂ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ 2020–2021ನೇ ಹಾಗು 2021–2022 ನೇ ಸಾಲುಗಳಲ್ಲಿ ವಿದ್ಯಾರ್ಥಿಗಳ ಮನವಿ ಮೇರೆಗೆ ಶೈಕ್ಷಣಿಕ ಮಂಡಳಿ ಹಾಗೂ ವ್ಯವಸ್ಥಾಪನ ಮಂಡಳಿಯ ಅನುಮೋದನೆ ಪಡೆದು ಎರಡು ಬಾರಿ ಪರೀಕ್ಷೆಗಳನ್ನು ಬರೆಯಲು ಅವಕಾಶವನ್ನು ನೀಡಲಾಗಿರುತ್ತದೆ.

2001–02 ರಿಂದ 2014–15ನೇ ಸಾಲಿನ ವಿದ್ಯಾರ್ಥಿಗಳು ಅಂತಿಮ ಅವಕಾಶ ನೀಡುವಂತೆ ಮನವಿ ಪತ್ರಗಳನ್ನು ಸಲ್ಲಿಸಿ ಕೋವಿಡ್–19 ಸಾಂಕ್ರಾಮಿಕ ರೋಗ, ಲಾಕ್‌ಡೌನ್ ಮತ್ತು ಅತಿವೃಷ್ಠಿಯಿಂದಾದ ಪ್ರಕೃತಿ ವಿಕೋಪ ಹಾಗೂ ಇನ್ನಿತರ ಸಮಸ್ಯೆಗಳಿಂದ ಹಿಂದಿನ ಸಾಲುಗಳಲ್ಲಿ ಪರೀಕ್ಷೆಗಳನ್ನು ಬರೆಯಲು ಸಾದ್ಯವಾಗದ ಹಿನ್ನೆಲೆಯಲ್ಲಿ 2022–23ನೇ ಸಾಲಿನಲ್ಲಿ ನಡೆಯುವ ಪರೀಕ್ಷೆಯ ಸಮಯದಲ್ಲಿ ಪೂರಕ ಪರೀಕ್ಷೆಯನ್ನು ಬರೆಯಲು ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಮೈಸೂರು ಪರೀಕ್ಷಾ ಕೇಂದ್ರವನ್ನು ಮಾತ್ರ ನಿಗದಿಪಡಿಸಿ ಪರೀಕ್ಷೆಗಳನ್ನು ನಡೆಸುವ ವಿಷಯವನ್ನು ಮಾನ್ಯ ಕುಲಪತಿಗಳ ಗಮನಕ್ಕೆ ತರಲಾಗಿದ್ದು ಮಾನ್ಯ ಕುಲಪತಿಗಳು ಸದರಿ ವಿಷಯವನ್ನು ಮುಂದೆ ನಡೆಯುವ ಶೈಕ್ಷಣಿಕ ಮಂಡಳಿ ಸಭೆ ಹಾಗೂ ವ್ಯವಸ್ಥಾಪನ ಮಂಡಳಿ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆದು ಕ್ರಮವಹಿಸುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ಚರ್ಚೆ:**

**ಕುಲಸಚಿವರು ಮೇಲಿನ ವಿಷಯದ ಬಗ್ಗೆ ಪ್ರಸ್ತಾಪಿಸಿ, ವಿದ್ಯಾರ್ಥಿಗಳು ಕರೆಮಾಡಿ Corona ಕಾರಣದಿಂದಾಗಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ ಆದ್ದರಿಂದ ದಯಮಾಡಿ ಮೊತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಮನವಿ ಮಾಡುತ್ತಿದ್ದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆ ಬರೆಯಲು ಅವಕಾಶ ನೀಡಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.**

**ಡೀನ್ (ಶೈಕ್ಷಣಿಕ) ರವರು ಮಾತನಾಡಿ ಈಗಾಗಲೇ ಹಳೆ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿರುತ್ತದೆ. ಆದರೂ ಮತ್ತೊಮ್ಮೆ ಅವಕಾಶ ನೀಡುವುದು ಅವಶ್ಯವೆ ಎಂದು ಸಭೆಯ ಗಮನಕ್ಕೆ ತಂದರು. ನಿರ್ದೇಶಕರು ವಾಣಿಜ್ಯ ನಿಕಾಯ ರವರು ಪರೀಕ್ಷೆ Syllabus ಗಳು ಬದಲಾವಣೆಯಾಗಿರುವುದರಿಂದ ಪರೀಕ್ಷೆ ನೀಡಲು ಬರುವುದಿಲ್ಲವೆಂದು ತಿಳಿಸಿದರು.**

**ಹಣಕಾಸು ಅಧಿಕಾರಿಗಳು ಮಾತನಾಡಿ 2001–02 ರಿಂದ 2014–15 ರ ಸಾಲಿನ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲು ಉದ್ದೇಶಿಸಿರುವುದು ಸರಿಯಷ್ಟೆ ಆದರೆ ಸುಮಾರು 22 ವರ್ಷಗಳಷ್ಟು ಹಳೆಯ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡುವಾಗ ವಿದ್ಯಾರ್ಥಿಗಳು ಹಳೇ Syllabus & Pattern ನಲ್ಲಿ ಪ್ರಶ್ನೆ ಪತ್ರಿಕೆಯನ್ನು ನೀಡಬೇಕಾಗುತ್ತದೆ ಅದು ಸಾಧ್ಯವೆ ಎಂದು ಕುಲಸಚಿವ (ಪರೀಕ್ಷಾಂಗ) ರವರಿಗೆ ಕೇಳಲಾಗಿ, ಕುಲಸಚಿವ (ಪರೀಕ್ಷಾಂಗ) ರವರು ಹೌದು ಇದು ಕಷ್ಟದ ವಿಷಯವೆ ಆದರೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆ ಬರೆಯಲು ಅವಕಾಶ ನೀಡುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.**

**ಮಾನ್ಯ ಕುಲಪತಿಗಳು ಈ ರೀತಿ ಹಳೆ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಬೇಕಾದಲ್ಲಿ ವರ್ಷವಾರು ವಿದ್ಯಾರ್ಥಿಗಳ Statistics ನೀಡಿದಲ್ಲಿ ಈ ಬಗ್ಗೆ ಪರಿಶೀಲಿಸಬಹುದಾಗುತ್ತದೆ ಮತ್ತು Syllabus & Pattern ಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಪ್ರಸ್ತುತ ಸಾಲಿನ Syllabus & Pattern ನಲ್ಲಿಯೇ ಪರೀಕ್ಷೆ ಬರೆಯಬೇಕಿರುತ್ತದೆ ಎಂದು ತಿಳಿಸಿದರು.**

**ತೀರ್ಮಾನ : ವರ್ಷವಾರು ವಿದ್ಯಾರ್ಥಿಗಳ Statistics ಅನ್ನು ಪರಿಶೀಲಿಸಿ ಒಂದು ವೇಳೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವ ವಿದ್ಯಾರ್ಥಿಗಳ ಸಂಖ್ಯೆಯು 500 ಕ್ಕೂ ಹೆಚ್ಚು ಇದ್ದಲ್ಲಿ 2001–02 ರಿಂದ 2014–15 ರವರೆಗೆ ವಿವಿಧ ಸ್ನಾತಕ/ಸ್ನಾತಕೋತ್ತರ ಶಿಕ್ಷಣ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಸಮ್ಮತಿ ನೀಡುವ ಬಗ್ಗೆ ತೀರ್ಮಾನಿಸಬಹುದು ಇದಕ್ಕಾಗಿ ಮುಂದಿನ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ Statistics ಹಾಜರು ಪಡಿಸುವಂತೆ ಕುಲಸಚಿವ (ಪರೀಕ್ಷಾಂಗ) ಇವರಿಗೆ ತಿಳಿಸಲಾಯಿತು.**

*********

## ವಿಷಯ ಸಂಖ್ಯೆ: 60.02

**ವಿಷಯ: Code of Conduct Monitoring ಸಮಿತಿಯ ನಡಾವಳಿಗಳಿಗೆ ಶೈಕ್ಷಣಿಕ ಮಂಡಳಿ ಸಭೆಯ ಅನುಸಮರ್ಥನೆ ಕೋರುವ ಬಗೆಗೆ.**

*********

ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗಳಲ್ಲಿ ಆಡಳಿತಾತ್ಮಕ, ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಇತರೆ Stake Holder ಗಳು ವಿವಿ ಯ Code of Conduct ನ್ನು ಕಾರ್ಯಗತಗೊಳಿಸಿರುವುದನ್ನು ಗಮನಿಸುವ ಸಂಬಂಧ Code of Conduct Monitoring ಸಮಿತಿಯನ್ನು ದಿನಾಂಕ: 03.03.2020 ರಂದು ರಚಿಸಲಾಗಿದ್ದು, ಸದರಿ ಸಮಿತಿಯು ವಿವಿಧ ದಿನಾಂಕಗಳಂದು ಒಟ್ಟು ನಾಲ್ಕು ಸಭೆಯನ್ನು ಕೈಗೊಂಡಿದ್ದು, ಸದರಿ ಸಭೆಗಳಲ್ಲಿ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸಿ ಅವುಗಳ ನಿರ್ಣಯವನ್ನು ಸಲ್ಲಿಸಿರುತ್ತಾರೆ.

ಈ ಸಂಬಂಧ ಮೇಲ್ಕಂಡ ಸಮಿತಿಯವರು ಸಲ್ಲಿಸಿರುವ ಒಟ್ಟು 04 ಸಭೆಗಳ ನಡಾವಳಿಗಳನ್ನು ಹಾಗೂ ಕೈಗೊಂಡಿರುವ ಪ್ರಕ್ರಿಯೆಗಳನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಸಮರ್ಥನೆ ಕೋರಿ ವಿಷಯವನ್ನು ಮಂಡಿಸಿದೆ.

**ಚರ್ಚೆ:**

**CIQA ವಿಭಾಗದಿಂದ** Code of Conduct Monitoring ಸಮಿತಿಯ ನಡಾವಳಿಯನ್ನು ಅವಲೋಕಿಸಲಾಯಿತು.

**ತೀರ್ಮಾನ : Code of Conduct Monitoring ಸಮಿತಿಯ ನಡಾವಳಿಗಳನ್ನು ಅನುಸಮರ್ಥನೆಗೊಳಿಸಲಾಯಿತು ಹಾಗೂ ಪರಿಷ್ಕೃತ Code of Conduct ಗೆ ಅನುಮೋದನೆ ನೀಡಲಾಯಿತು.**

*********

**ವಿಷಯ ಸಂಖ್ಯೆ: 60.03**

**ವಿಷಯ: ಭೌತಶಾಸ್ತ್ರ ವಿಭಾಗದ ಪ್ರಯೋಗಶಾಲೆಗೆ ಉಪಕರಣಗಳನ್ನು ಖರೀದಿಸುವ ಬಗ್ಗೆ.**

******

ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದಲ್ಲಿ, ಭೌತಶಾಸ್ತ್ರ ಅಧ್ಯಯನ ವಿಭಾಗವು 2012 ರಲ್ಲಿ ಕಾರ್ಯಾರಂಭ ಮಾಡಿದ್ದು, ವಿಭಾಗದಲ್ಲಿ ಇಂದಿನವರೆವಿಗೂ ಸುಸಜ್ಜಿತವಾದ ಪ್ರಯೋಗಶಾಲೆ ಸ್ಥಾಪಿತವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಒಂದು ಸುಸಜ್ಜಿತವಾದ ಪ್ರಯೋಗಶಾಲೆ ಸ್ಥಾಪಿಸುವ ನಿಟ್ಟಿನಲ್ಲಿ ಪ್ರಯೋಗಶಾಲೆ ಉಪಕರಣಗಳನ್ನು ಖರೀದಿಸಲು ತಾಂತ್ರಿಕ ಸಮಿತಿಯೊಂದನ್ನು ರಚಿಸಲಾಗಿತ್ತು. ಸದರಿ ತಾಂತ್ರಿಕ ಸಮಿತಿಯಲ್ಲಿ ಅನುಮೋದನೆ ಪಡೆಯಲಾಗಿರುವ ಉಪಕರಣಗಳನ್ನು ಖರೀದಿಸಲು ಬೇಕಿರುವ ಅಂದಾಜು ಮೊತ್ತ ರೂ.55,00,000/– ಗಳಾಗಿರುತ್ತದೆ. ಆದರೆ, 2022–23ರ ಆಯವ್ಯಯ ಅಂದಾಜಿನಲ್ಲಿ (ಶೀರ್ಷಿಕೆ ಸಂಖ್ಯೆ: 230/10) ಭೌತಶಾಸ್ತ್ರ ವಿಭಾಗಕ್ಕೆ ರೂ.10,00,000/– ಗಳನ್ನು ಮಾತ್ರ ಹಂಚಿಕೆ ಮಾಡಲಾಗಿದೆ. ಈ ಸಂಬಂಧ ಮಾನ್ಯ ಹಣಕಾಸು ಅಧಿಕಾರಿಗಳೊಂದಿಗೆ ಚರ್ಚಿಸಿದಾಗ, ಸದರಿ 004/230 ಶೀರ್ಷಿಕೆಯಡಿ 2022–23 ನೇ ಸಾಲಿನಲ್ಲಿ ವಿವಿಧ ವಿಭಾಗಗಳಿಗೆ ಹಂಚಿಕೆ ಮಾಡಲಾಗಿರುವ ಮೊತ್ತಗಳನ್ನು ಭೌತಶಾಸ್ತ್ರ ವಿಭಾಗಕ್ಕೆ ಮರು ಹಂಚಿಕೆ ಮಾಡಲು ಆಯಾ ವಿಭಾಗಗಳ ಮುಖ್ಯಸ್ಥರು ಲಿಖಿತ ರೂಪದಲ್ಲಿ ಒಪ್ಪಿಗೆ ನೀಡಿದಲ್ಲಿ ಸದರಿ ಮೊತ್ತಗಳನ್ನು ಭೌತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಮರು ಹಂಚಿಕೆ ಮಾಡಿ ಭೌತಶಾಸ್ತ್ರ ಅಧ್ಯಯನ ವಿಭಾಗದ ಪ್ರಯೋಗಶಾಲೆಗೆ ಅವಶ್ಯವಿರುವ ಉಪಕರಣಗಳನ್ನು ಖರೀದಿ ಮಾಡಬಹುದು ಎಂದು ತಿಳಿಸಿರುತ್ತಾರೆ.

ಈ ಸಂಬಂಧ ಕೆಳಕಂಡ 05 ವಿಭಾಗಗಳ ಮುಖ್ಯಸ್ಥರನ್ನು ಸಂಪರ್ಕಿಸಿದಾಗ 004/230ರ ಅಡಿಯ ತಮ್ಮ ವಿಭಾಗಗಳ ಮೊತ್ತಗಳನ್ನು ಭೌತಶಾಸ್ತ್ರ ವಿಭಾಗಕ್ಕೆ ಮರು ಹಂಚಿಕೆ ಮಾಡಲು ಲಿಖಿತವಾಗಿ ಒಪ್ಪಿಗೆಯನ್ನು ನೀಡಿರುತ್ತಾರೆ (ಪ್ರತಿ ಲಗತ್ತಿಸಿದೆ). ಸದರಿ ವಿಭಾಗಗಳ ಮುಖ್ಯಸ್ಥರುಗಳು ಮರು ಹಂಚಿಕೆ ಮಾಡಲು ಒಪ್ಪಿರುವ ಮೊತ್ತಗಳ ವಿವರ ಈ ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ವಿಭಾಗಗಳು | ಶೀರ್ಷಿಕೆ | ಮೊತ್ತಗಳ ವಿವರಗಳು (ರೂ.ಗಳಲ್ಲಿ) |
|---|---|---|---|
| 01 | ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ | 004/230/03 | 10,00,000/– |
| 02 | ಕಂಪ್ಯೂಟರ್ ವಿಭಾಗ | 004/230/05 | 10,00,000/– |
| 03 | ಭೂಗೋಳಶಾಸ್ತ್ರ ವಿಭಾಗ | 004/230/07 | 8,00,000/– |
| 04 | ಸಸ್ಯಶಾಸ್ತ್ರ ವಿಭಾಗ | 004/230/16 | 10,00,000/– |
| 05 | ಪ್ರಾಣಿಶಾಸ್ತ್ರ ವಿಭಾಗ | 004/230/17 | 10,00,000/– |
| | | **ಒಟ್ಟು ಮೊತ್ತ** | **48,00,000/–** |

ಅಲ್ಲದೆ 230/10ರ ಶೀರ್ಷಿಕೆಯಡಿ ಭೌತಶಾಸ್ತ್ರ ವಿಭಾಗಕ್ಕೆ ರೂ.10,00,000/– ಗಳನ್ನು ಹಂಚಿಕೆ ಮಾಡಲಾಗಿದೆ.

ಮೇಲ್ಕಾಣಿಸಿದ ವಿಭಾಗಗಳ ಒಟ್ಟು ಮೊತ್ತವನ್ನು (ರೂ.48,00,000/–) ಭೌತಶಾಸ್ತ್ರ ವಿಭಾಗಕ್ಕೆ ಮರು ಹಂಚಿಕೆ ಮಾಡಿದಲ್ಲಿ ಒಟ್ಟು ರೂ. 48,00,000/– + ರೂ. 10,00,000/– = ರೂ.58,00,000/–ಗಳಾಗಲಿದ್ದು ಭೌತಶಾಸ್ತ್ರ ವಿಭಾಗದ ಪ್ರಯೋಗಶಾಲೆ ಉಪಕರಣಗಳನ್ನು ಖರೀದಿಸಲು ಸಾಧ್ಯವಾಗಲಿದೆ.

ಮುಂದುವರೆದು, 2023ರ NAAC ಸಮಿತಿಯ ಭೇಟಿ ಸಂದರ್ಭದೊಳಗೆ ಭೌತಶಾಸ್ತ್ರ ವಿಭಾಗದ ಪ್ರಯೋಗಶಾಲೆಯನ್ನು ಸಿದ್ಧಪಡಿಸಬೇಕಾದ ಅನಿವಾರ್ಯತೆ ಕೂಡ ಇರುವ ಕಾರಣ, ಸದರಿ ವಿಷಯವನ್ನು ಮುಂಬರುವ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ಚರ್ಚೆ**

ಭೌತಶಾಸ್ತ್ರ ವಿಭಾಗದ ಪ್ರಯೋಗಶಾಲೆಗೆ ಉಪಕರಣಗಳನ್ನು ಖರೀದಿಸುವ ಸಂಬಂಧ ತಾಂತ್ರಿಕ ತಜ್ಞರ ಸಮಿತಯನ್ನು ರಚಿಸಿ ಸಮಿತಿ ವರದಿಯಂತೆ ಉಪಕರಣಗಳನ್ನು ಖರೀದಿಸುವುದು ಸೂಕ್ತವೆಂದು ಮಾನ್ಯ ಕುಲಪತಿಗಳು ತಿಳಿಸಿದರು.

ಈ ಬಗ್ಗೆ ಮಾತನಾಡಿದ ನಿರ್ದೇಶಕರು CIQA ರವರು ಈಗಾಗಲೇ ತಜ್ಞರ ಸಮಿತಯನ್ನು ರಚಿಸಿ ಸಮಿತಿಯ ಅನುಮೋದನೆಯಂತೆ ಉಪಕರಣಗಳನ್ನು ಖರೀದಿಸಲು ರೂ.55,00,000/– ಗಳ ಅವಶ್ಯಕತೆ ಇದ್ದು, ಹಣಕಾಸು ಅಧಿಕಾರಿಗಳು ತಿಳಿಸಿರುವಂತೆ ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕಂಪ್ಯೂಟರ್ ವಿಭಾಗ, ಭೂಗೋಳಶಾಸ್ತ್ರ ವಿಭಾಗ, ಸಸ್ಯಶಾಸ್ತ್ರ ವಿಭಾಗ ಹಾಗೂ ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥರುಗಳು ಭೌತಶಾಸ್ತ್ರ ಅಧ್ಯಯನ ವಿಭಾಗದ ಪ್ರಯೋಗಶಾಲೆಗೆ ಉಪಕರಣಗಳನ್ನು ಖರೀದಿಸುವ ಸಂಬಂಧ 004/230 ಶೀರ್ಷಿಕೆಯಡಿ 2022–23 ನೇ ಸಾಲಿನಲ್ಲಿ ತಮ್ಮ ವಿಭಾಗಗಳಿಗೆ ಹಂಚಿಕೆ ಮಾಡಲಾಗಿರುವ ಮೊತ್ತಗಳನ್ನು ಭೌತಶಾಸ್ತ್ರ ವಿಭಾಗಕ್ಕೆ ಮರು ನಿಗಧಿ ಮಾಡಲು ಸಮ್ಮತಿ ಸೂಚಿಸಿರುವುದಾಗಿ ಸಭೆಯ ಗಮನಕ್ಕೆ ತಂದರು.

**ತೀರ್ಮಾನ : ತಂತ್ರಜ್ಞಾನ ವಿಭಾಗ, ಕಂಪ್ಯೂಟರ್ ವಿಭಾಗ, ಭೂಗೋಳಶಾಸ್ತ್ರ ವಿಭಾಗ, ಸಸ್ಯಶಾಸ್ತ್ರ ವಿಭಾಗ ಹಾಗೂ ಪ್ರಾಣಿಶಾಸ್ತ್ರ ವಿಭಾಗಗಳಿಗೆ ಹಂಚಿಕೆ ಮಾಡಲಾಗಿರುವ ಮೊತ್ತವನ್ನು ಭೌತಶಾಸ್ತ್ರ ವಿಭಾಗಕ್ಕೆ ಮರು ಹಂಚಿಕೆ ಮಾಡಿಕೊಂಡು ಪ್ರಯೋಗಶಾಲೆಗೆ ನಿಯಮಾನುಸಾರ ಉಪಕರಣಗಳನ್ನು ಖರೀದಿಸುವ ಬಗ್ಗೆ ಅನುಮೋದನೆ ನೀಡಲಾಯಿತು.**

*********

**ವಿಷಯ ಸಂಖ್ಯೆ:60.04**

**ವಿಷಯ : ಪರಿಷ್ಕೃತ ಪರೀಕ್ಷಾಂಗ ಕೈಪಿಡಿಯನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಮೋದಿಸುವ ಬಗ್ಗೆ.**

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಕಾರ್ಯಗಳನ್ನು ನಿಯಮಬದ್ಧವಾಗಿ ಹಾಗೂ ಸುಲಲಿತವಾಗಿ ನಿರ್ವಹಿಸಲು ಪರೀಕ್ಷಾ ಕೈಪಿಡಿಯನ್ನು ರಚಿಸಲಾಗಿತ್ತು. ಅದರನ್ವಯ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯವನ್ನು ನಿರ್ವಹಿಸಲಾಗುತ್ತಿತ್ತು. ಬದಲಾದ ಕಾಲಘಟ್ಟಕ್ಕೆ ಅನುಗುಣವಾಗಿ ವಿಶ್ವವಿದ್ಯಾನಿಲಯದಲ್ಲಿ ಹಲವಾರು ಶೈಕ್ಷಣಿಕ ಬದಲಾವಣೆಗಳಾಗಿದ್ದು (CBCS ಅನ್ನು ಅಳವಡಿಸಿಕೊಂಡಿರುವುದು Annual Mode ನಿಂದ Semester Scheme ಗೆ) ಇವುಗಳ ಬಗ್ಗೆ ಪ್ರಸ್ತುತ ಚಾಲ್ತಿಯಲ್ಲಿದಂತಹ ಕೈಪಿಡಿಯಲ್ಲಿ ಯಾವುದೇ ಉಲ್ಲೇಖಗಳು ಇಲ್ಲದಿರುವುದನ್ನು ಮನಗಂಡು ದಿನಾಂಕ 04–03–2020 ಹಾಗೂ 18–11–2022 ರಂದು ಪರೀಕ್ಷಾಂಗ ಕೈಪಿಡಿಯನ್ನು ಪರಿಷ್ಕರಿಸುವ ಸಂಬಂಧ ಸಮಿತಿಯೊಂದನ್ನು ರಚಿಸಲಾಗಿದ್ದು, ಸದರಿ ಸಮಿತಿಗೆ ಎಲ್ಲಾ ಮಾಹಿತಿಯನ್ನು ಒಳಗೊಂಡಂತೆ

ಪರೀಕ್ಷಾ ಕೈಪಿಡಿಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಅದರ ಅನ್ವಯ ಸದರಿ ಸಮಿತಿಯು ಸಿದ್ಧಪಡಿಸಿರುವ ಪರೀಕ್ಷಾಂಗ ಕೈಪಿಡಿಯ ಕರಡು ಪ್ರತಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ಚರ್ಚೆ:**

ನಿರ್ದೇಶಕರು ವಾಣಿಜ್ಯ ನಿಕಾಯ ರವರು ಮಾತನಾಡಿ ಪ್ರಸ್ತುತವಿರುವ ಪರೀಕ್ಷಾ ಕೈಪಿಡಿಯಲ್ಲಿ ಸಿ.ಬಿ.ಸಿ.ಎಸ್, ಪಿಹೆಚ್.ಡಿ. ಕೋರ್ಸ್ ವರ್ಕ್, ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಬಂಧಿಸಿದ ಮಾಹಿತಿ ಲಭ್ಯವಿರುವುದಿಲ್ಲ ಈ ಹಿನ್ನೆಲೆಯಲ್ಲಿ ಹೊಸದಾಗಿ ಪರೀಕ್ಷಾ ಕೈಪಿಡಿಯನ್ನು ಸಿದ್ಧಪಡಿಸಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಕುಲಪತಿಗಳು ಪ್ರವೇಶಾತಿ ಕೈಪಿಡಿಯನ್ನು ಸಹ ಸಿದ್ಧಪಡಿಸಿಕೊಂಡು ವಿದ್ಯಾರ್ಥಿಗಳ ಪ್ರವೇಶಾತಿ ಸಂದರ್ಭದಲ್ಲಿ ಮುದ್ರಿತ ಪ್ರತಿಯನ್ನು ನೀಡಬೇಕು ಈ ರೀತಿ ನೀಡಿದಲ್ಲಿ ವಿದ್ಯಾರ್ಥಿಗಳಿಗೆ ಸರಿಯಾದ ಮಾಹಿತಿ ಲಭ್ಯವಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆ ಅನುಕುಲವಾಗುತ್ತದೆಂದು ತಿಳಿಸಿ ಕುಲಸಚಿವರಿಗೆ ಈ ಬಗ್ಗೆ ಕ್ರಮವಹಿಸುವಂತೆ ಸೂಚಿಸಿದರು.

**ತೀರ್ಮಾನ : ಪರೀಕ್ಷಾಂಗ ಕೈಪಿಡಿಯ ಕರಡು ಪ್ರತಿಯನ್ನು ಅನುಮೋದಿಸಲಾಯಿತು.**

*********

**ವಿಷಯ ಸಂಖ್ಯೆ: 60.05**

**ವಿಷಯ : National Education Policy-2020 ಘಟಕಕ್ಕೆ ನೋಡೆಲ್ ಅಧಿಕಾರಿಯನ್ನು ನೇಮಕಾತಿ ಮಾಡಿರುವ ಬಗ್ಗೆ.**

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ National Education Policy-2020 ಘಟಕಕ್ಕೆ ಡಾ. ಸಿ. ಮಹಾದೇವಮೂರ್ತಿ, ಪ್ರಾಧ್ಯಾಪಕರು ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಕರಾಮುವಿ ಮೈಸೂರು ಇವರನ್ನು ಆದೇಶ ಸಂಖ್ಯೆ: ಕರಾಮುವಿ/ಡೀನ್(ಶೈ)–04/42/NEP CELL/2021–22, ದಿನಾಂಕ: 06–08–2022ರಿಂದ (ಪ್ರತಿ ಲಗತ್ತಿಸಿದೆ) ಜಾರಿಗೆ ಬಂದಂತೆ ಅಧ್ಯಯನ ವಿಭಾಗದ ಕಾರ್ಯ ನಿರ್ವಹಣೆ ಜೊತೆಗೆ, ಹೆಚ್ಚುವರಿಯಾಗಿ National Education Policy-2020 NEP CELLಗೆ ನೋಡೆಲ್ ಅಧಿಕಾರಿಯನ್ನಾಗಿ, ಮಾನ್ಯ ಕುಲಪತಿಗಳ ಅನುಮೋದನೆಯಂತೆ ನೇಮಿಸಿ ಕಚೇರಿ ಆದೇಶ ಹೊರಡಿಸಲಾಗಿದೆ, ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಸಭೆಯ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

**ತೀರ್ಮಾನ : ಡಾ. ಸಿ. ಮಹಾದೇವಮೂರ್ತಿ, ಪ್ರಾಧ್ಯಾಪಕರು ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಕರಾಮುವಿ ಮೈಸೂರು ಇವರನ್ನು National Education Policy–2020 ಘಟಕಕ್ಕೆ ನೋಡೆಲ್ ಅಧಿಕಾರಿಯನ್ನು ನೇಮಕಾತಿ ಮಾಡಿರುವ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು. ಸದರಿ ಘಟಕವು ಕಾಲಕಾಲಕ್ಕೆ ಕೈಗೊಂಡಿರುವ ಚಟುವಟಿಕೆಗಳ ವರದಿಯನ್ನು ಶೈಕ್ಷಣಿಕ ಮಂಡಳಿಗೆ ನೀಡಲು ಸೂಚಿಸುವಂತೆ ಡೀನ್ (ಶೈಕ್ಷಣಿಕ) ರವರಿಗೆ ತಿಳಿಸಲಾಯಿತು.**

*********

**ವಿಷಯ ಸಂಖ್ಯೆ: 60.06**

**ವಿಷಯ:** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನೂತನವಾಗಿ ಸ್ಥಾಪನೆಗೊಂಡಿರುವ 'ಮಹಿಳಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ'ವನ್ನು 'ಮಹಿಳಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ' ಎಂದು ಮತ್ತು ಸದರಿ ಅಧ್ಯಯನ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಯೋಜನಾಧಿಕಾರಿಯನ್ನು "ನಿರ್ದೇಶಕರು" (ಸ್ವತಂತ್ರ ಕಾರ್ಯಭಾರ) ಎಂದು ಬದಲಾಯಿಸುವ ಬಗ್ಗೆ.

*************

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನೂತನವಾಗಿ ಸ್ಥಾಪನೆಗೊಂಡಿರುವ 'ಮಹಿಳಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ'ವನ್ನು DRAFT GUIDELINES FOR DEVELOPMENT OF WOMEN'S STUDIES CENTRES IN INDIAN UNIVERSITIES AND COLLEGES (2019) UGC ಗೈಡ್‌ಲೈನ್ಸ್ ಪ್ರಕಾರ ಮೇಲ್ದರ್ಜೆಗೇರಿಸುವ ಸಂಬಂಧ ದಿನಾಂಕ: 02–08–2022 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಲಹಾ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ (ನಡಾವಳಿ ಪ್ರತಿ ಲಗತ್ತಿಸಿದೆ) ಸದರಿ ಕೇಂದ್ರವನ್ನು 'ಮಹಿಳಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ' ಎಂದು ಮೇಲ್ದರ್ಜೆಗೇರಿಸಲು ಹಾಗೂ ಸದರಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಯೋಜನಾಧಿಕಾರಿಯನ್ನು ಮಹಿಳಾ ಅಧ್ಯಯನ ಮತ್ತು ಸಂಶೋಧನಾ ವಿಭಾಗದ "ನಿರ್ದೇಶಕರು" (ಸ್ವತಂತ್ರ ಕಾರ್ಯಭಾರ) ಎಂದು ನೇಮಕಗೊಳಿಸಲು ತೀರ್ಮಾನಿಸಲಾಗಿರುತ್ತದೆ.

ಮಹಿಳಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಸ್ಥಾಪಿತವಾದ ನಂತರ ಈ ಕೆಳಕಂಡ ಸೌಕರ್ಯಗಳನ್ನು ಒದಗಿಸಬೇಕಾಗಿರುತ್ತದೆ.

1. ಮಹಿಳಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ' ವು ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸಲು ವಿಭಾಗಕ್ಕೆ ಪ್ರತ್ಯೇಕವಾದ ಹಣಕಾಸು ನಿಧಿಯನ್ನು ನಿಗದಿಗೊಳಿಸುವುದು.
2. ಮಹಿಳಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ' ವು ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸಲು ವಿಭಾಗಕ್ಕೆ ಪ್ರತ್ಯೇಕವಾದ ಸಹಾಯಕ ಸಿಬ್ಬಂಧಿಯನ್ನು ಒದಗಿಸುವುದು.
3. ಮಹಿಳಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ' ವು ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸಲು ವಿಭಾಗಕ್ಕೆ ಪ್ರತ್ಯೇಕವಾದ ಮೂಲಸೌಕರ್ಯ ಮತ್ತು ಪೀಠೋಪಕರಣಗಳನ್ನು ಒದಗಿಸುವುದು.
4. ಮಹಿಳಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ' ವು ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸಲು ವಿಭಾಗಕ್ಕೆ ಪ್ರತ್ಯೇಕವಾದ "ಮಹಿಳಾ ಅಧ್ಯಯನ" ವಿಷಯಕ್ಕೆ ಸಂಬಂಧಿಸಿದ ವಿಷಯ ತಜ್ಞರನ್ನು ಒದಗಿಸುವುದು.
5. ಮಹಿಳಾ ಅಧ್ಯಯನ ಮತ್ತು ಸಂಶೋಧನಾ ವಿಭಾಗದ "ನಿರ್ದೇಶಕರು" (ಸ್ವತಂತ್ರ ಕಾರ್ಯಭಾರ) ಇವರು ತಮ್ಮ ಮೂಲ ವಿಭಾಗದಲ್ಲಿ ಪಿಎಚ್. ಡಿ ಮಾರ್ಗದರ್ಶನ ಕಾರ್ಯವನ್ನು ಮುಂದುವರೆಸುವುದು. ಹಾಗೂ ಪಿಎಚ್.ಡಿ ಸದಸ್ಯತ್ವದ ಕಾರ್ಯವನ್ನು ಮುಂದುವರೆಸುವುದು.
6. ಮಹಿಳಾ ಅಧ್ಯಯನ ಮತ್ತು ಸಂಶೋಧನಾ ವಿಭಾಗದ "ನಿರ್ದೇಶಕರು" (ಸ್ವತಂತ್ರ ಕಾರ್ಯಭಾರ) ಇವರು ಈಗಾಗಲೇ ಸದಸ್ಯತ್ವವನ್ನು ಪಡೆದ 'ಅಧ್ಯಯನ ಮಂಡಳಿ ಸಭೆ'ಗಳಲ್ಲಿ ತಮ್ಮ ಕರ್ತವ್ಯ ನಿರ್ವಹಿಸುವುದು.
7. ಮಹಿಳಾ ಅಧ್ಯಯನ ಮತ್ತು ಸಂಶೋಧನಾ ವಿಭಾಗದ "ನಿರ್ದೇಶಕರು" (ಸ್ವತಂತ್ರ ಕಾರ್ಯಭಾರ) ಇವರು ತಮ್ಮ ಮೂಲ ವಿಭಾಗದಲ್ಲಿ ಈಗಾಗಲೇ ಕೈಗೊಂಡಿರುವ ಪ್ರಾಯೋಜಿತ ಕಾರ್ಯಗಳನ್ನು ನಿರ್ವಹಿಸುವುದು.

ಸದರಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಅನುಷ್ಠಾನಗೊಳಿಸಲು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ :** **ವಿಭಾಗವನ್ನು** Establishment ಮಾಡಲು ಇರುವ ನಿಯಮ ಮತ್ತು ಮಾನದಂಡಗಳಿಗೆ ಉಲ್ಲಂಘನೆಯಾಗದಂತೆ ಕ್ರಮವಹಿಸುವಂತೆ ತಿಳಿಸಲಾಯಿತು ಹಾಗೂ ವಿವಿ ಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ 'ಮಹಿಳಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ'ವನ್ನು 'ಮಹಿಳಾ ಅಧ್ಯಯನ ಮತ್ತು ಸಂಶೋಧನಾ ವಿಭಾಗ' ಎಂದು ಹಾಗೂ ಸಂಯೋಜನಾಧಿಕಾರಿಯನ್ನು "ಮುಖ್ಯಸ್ಥರು" ಎಂದು ನೇಮಿಸುವ ಬಗ್ಗೆ ಅನುಮೋದನೆ ನೀಡಲಾಯಿತು.

*********

**ವಿಷಯ ಸಂಖ್ಯೆ: 60.07**

ವಿಷಯ: ವಿಶ್ವವಿದ್ಯಾನಿಲಯದ ಅಧ್ಯಾಪಕರು ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸುವ ಸಂದರ್ಭ ನೋಂದಣಿ ಶುಲ್ಕ/ಪ್ರಯಾಣ ಭತ್ಯೆ ಇತ್ಯಾದಿಗಳನ್ನು ನೀಡಲು ರಚಿಸಿದ್ದ ಸಮಿತಿಯು ನೀಡಿರುವ ಸಭೆಯ ನಡಾವಳಿಯನ್ನು ಅನುಮೋದನೆ ಪಡೆಯುವ ಬಗ್ಗೆ.

* * * *

ವಿಶ್ವವಿದ್ಯಾನಿಲಯದ ಅಧ್ಯಾಪಕರು ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸುವ ಸಂದರ್ಭ ನೋಂದಣಿ ಶುಲ್ಕ/ಪ್ರಯಾಣ ಭತ್ಯೆ ಇತ್ಯಾದಿಗಳನ್ನು ನೀಡಲು ವರದಿ ಪಡೆಯಲು ಆದೇಶ ಸಂಖ್ಯೆ: ಕರಾಮುವಿ/ಡೀನ್(ಶೈ)–03/2022–23,ದಿನಾಂಕ:27.04.2022ರಂತೆ ಸಮಿತಿ ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ: 01.12.2022ರಂದು ಸಭೆ ನಡೆಸಿ, ಈ ಕೆಳಕಂಡ ಅಂಶಗಳನೊಳಗೊಂಡಂತೆ ವರದಿ ರೂಪದಲ್ಲಿ ನಡಾವಳಿ ಸಲ್ಲಿಸಿದೆ.

- ಪ್ರಸಕ್ತ ಶೈಕ್ಷಣಿಕ ಸಾಲಿನ ಆಯವ್ಯಯದಲ್ಲಿ 10,00,000/– ಮೊತ್ತವಿದ್ದು, ಸದರಿ ಹಣದಲ್ಲಿ ಈಗಾಗಲೇ ಡೀನ್ (ಶೈಕ್ಷಣಿಕ) ವಿಭಾಗಕ್ಕೆ ಸಲ್ಲಿಕೆಯಾಗಿರುವ ಹಾಗೂ ಮಾರ್ಚ್ ಅಂತ್ಯದೊಳಗೆ ಹೊಸ ಪ್ರಸ್ತಾವನೆಗಳ ಸಲ್ಲಿಕೆಯಾಗಿದ್ದಲ್ಲಿ ಅವುಗಳ ಮೇರಿಟ್ ಆಧಾರದ ಮೇರೆಗೆ ನಿರ್ಧರಿಸಿ ಅನುಮೋದಿಸಬಹುದಾಗಿದೆ.
- ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಲು ನುರಿತ ಅಧ್ಯಾಪಕರೊಳಗೊಂಡಂತಹ ಒಂದು ಸ್ಥಾಯಿ ಸಮಿತಿ ರಚಿಸಬಹುದಾಗಿದೆ.
- ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಾದರೆ ಪ್ರತಿ ಅಧ್ಯಾಪಕರುಗಳಿಗೆ 35,000/– ರೂ.ಗಳಿಗೆ ಮೀರದಂತೆ ಮಂಜೂರು ಮಾಡಬಹುದಾಗಿದೆ.
- ಈಗಾಗಲೇ ಸಮಯಾವಕಾಶ ತುಂಬಾ ಕಡಿಮೆ ಇರುವುದರಿಂದ ಒಬ್ಬ ಅಧ್ಯಾಪಕರಿಗೆ ಒಂದು ಕಾರ್ಯಕ್ರಮಕ್ಕೆ ಸೀಮಿತವಾದಂತೆ ಅನುಮತಿಸಬಹುದಾಗಿದೆ.
- ಸ್ಥಾಯಿ ಸಮಿತಿಯವರು ಪ್ರಸ್ತಾವನೆಗಳನ್ನು Policy Document on Promotion of Researchನ ನಿಯಮಾವಳಿಗಳ ಪ್ರಕಾರ ಕ್ರಮವಹಿಸುವುದು.

ಈ ರೀತಿಯ ಅಂಶವನ್ನು ಸಮಿತಿಯು ಸಲ್ಲಿಸಿದೆ. ಇದನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ಚರ್ಚೆ**

Teacher Knowledge Enahancement ಉದ್ದೇಶದಿಂದ ವಿವಿ ನಿಲಯದ ಯಾವುದೇ ವಿಭಾಗದ ಖಾಯಂ / ತಾತ್ಕಾಲಿಕ / ಅತಿಥಿ ಉಪನ್ಯಾಸಕರು Orientation Programme, Refreshment Programme, Conference ಗಳಿಗೆ ಹೋದಲ್ಲಿ ಅಂತವರಿಗೆ ವಿವಿ ನಿಲಯದ ವತಿಯಿಂದ ನೋಂದಣಿ ಶುಲ್ಕ/ಪ್ರಯಾಣ ಭತ್ಯೆ ಇತ್ಯಾದಿಗಳನ್ನು ನೀಡಿ ಪ್ರೋತ್ಸಾಹಿಸ ಬೇಕಾಗುತ್ತದೆ. ಈ ರೀತಿ ಭತ್ಯೆಗಳನ್ನು ಪಡೆಯಲು Teacher ಗಳು ತಮಗೆ ಬಂದಿರುವ ಆಹ್ವಾನ, ಹಾಜರಾಗಿರುವ ಬಗ್ಗೆ ಹಾಜರಾತಿ ಪ್ರಮಾಣ ಪತ್ರ, ಪತ್ರಿಕೆ ಮಂಡಿಸಿದ್ದಲ್ಲಿ ಆ ಬಗೆಗಿನ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸ ಬೇಕು. ಮತ್ತು ಕೇವಲ ಭೇಟಿ ನೀಡಿ ಬಂದಲ್ಲಿ ಯಾವುದೇ ರೀತಿಯ ಭತ್ಯೆಗಳನ್ನು ಪಾವತಿಸಲು ಸಾಧ್ಯವಿಲ್ಲವೆಂದು ಮಾನ್ಯ ಕುಲಪತಿಗಳು ತಿಳಿಸಿದರು.

**ತೀರ್ಮಾನ :** **ವಿಶ್ವವಿದ್ಯಾನಿಲಯದ ಅಧ್ಯಾಪಕರು ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸುವ ಸಂದರ್ಭ ನೋಂದಣಿ ಶುಲ್ಕ/ಪ್ರಯಾಣ ಭತ್ಯೆ ಇತ್ಯಾದಿಗಳನ್ನು ನೀಡಲು ರಚಿಸಿದ್ದ ಸಮಿತಿಯ ನಡವಳಿಯನ್ನು ಅನುಮೋದಿಸಲಾಯಿತು. ಈ ಬಗ್ಗೆ ಅಧ್ಯಾಪಕರು ಆಹ್ವಾನ ಪತ್ರ, ಮಂಡಿಸುವ ಪತ್ರಿಕೆ, ಸಮ್ಮೇಳನ Brochure ಗಳನ್ನು ಸಲ್ಲಿಸಿ ಅನುಮೋದನೆ ಪಡೆಯಬೇಕು. ಸಮ್ಮೇಳನ ಮುಗಿದ ನಂತರ ಹಾಜರಾತಿ ಪತ್ರ, ನೋಂದಣಿ ಶುಲ್ಕದ ರಶೀದಿ ಹಾಗೂ ಪ್ರಮಾಣ ಪತ್ರಗಳನ್ನು ಹಾಜರು ಪಡಿಸಬೇಕು ಎಂದು ತೀರ್ಮಾನಿಸಲಾಯಿತು.**

*********

**ವಿಷಯ ಸಂಖ್ಯೆ : 60.08**

ವಿಷಯ: Academic and Administrative Audit Report ಅನ್ನು ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸುವ ಬಗೆಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆ ಪಡೆಯುವ ಸಂಬಂಧ ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ವಿಭಾಗಗಳ ಹಾಗೂ ಇತರೆ ವಿಭಾಗಗಳ ಕಾರ್ಯಚಟುವಟಿಕೆಗಳನ್ನು Internal Audit ಮಾಡುವ ಸಂಬಂಧ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯ ಸದಸ್ಯರುಗಳು ದಿನಾಂಕ: 19.09.2022 ರಿಂದ 21.09.2022 ರವರೆಗೆ ಭೇಟಿ ನೀಡಿ Academic and Administrative Audit ಕಾರ್ಯವನ್ನು ಕೈಗೊಂಡಿದ್ದು, ಸದರಿ ಸಮಿತಿಯವರು Audit Report ಅನ್ನು Director (CIQA) ಇವರಿಗೆ ಸಲ್ಲಿಸಿರುವುದರಿಂದ, ಸದರಿ ವರದಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ:** **Academic and Administrative Audit ವರದಿಯನ್ನು ಅನುಮೋದಿಸಲಾಯಿತು.**

*********

**ವಿಷಯ ಸಂಖ್ಯೆ : 60.09**

ವಿಷಯ : ಎಂ.ಎ/ಎಂ.ಕಾಂ ಸಂಪರ್ಕ ತರಗತಿಗಳ ಕಾಲಾವಧಿಯನ್ನು ನಿಗದಿ ಪಡಿಸುವ ಬಗೆಗೆ.

*****

ವಿಶ್ವವಿದ್ಯಾನಿಲಯದಲ್ಲಿ ಸಂಪರ್ಕ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಈ ಹಿಂದೆ ಎಂ.ಎ/ಎಂ.ಕಾಂ ಶಿಕ್ಷಣಕ್ರಮಗಳು ವಾರ್ಷಿಕವಾರು ಪದ್ದತಿಯಲ್ಲಿ ನದೆಸಲಾಗುತ್ತಿತ್ತು. ಪ್ರತಿ ಶೈಕ್ಷಣಿಕ ಸಾಲಿನಲ್ಲಿ ಆಯ್ದ ಪ್ರಾದೇಶಿಕ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಗೆ ಅನುಗುಣವಾಗಿ ಸಂಪರ್ಕ ಕಾರ್ಯಕ್ರಮವನ್ನು ನಡೆಸಲಾಗುತ್ತಿತ್ತು. ಎಂ.ಎ/ಎಂ.ಕಾಂ ನ ಸಂಪರ್ಕ ಕಾರ್ಯಕ್ರಮಗಳಿಗೆ ಮೊದಲ ವರ್ಷಕ್ಕೆ 25 ಗಂಟೆ ಹಾಗೂ ಅಂತಿಮ ವರ್ಷಕ್ಕೆ 25 ಗಂಟೆ ಒಟ್ಟಾರೆಯಾಗಿ 50 ಗಂಟೆಗಳ ಕಾಲ ಸಂಪರ್ಕ ತರಗತಿಗಳನ್ನು ಐದು ದಿನಗಳಲ್ಲಿ ನಡೆಸಲಾಗುತ್ತಿತ್ತು.

ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಎಂ.ಎ/ಎಂ.ಕಾಂ ಶಿಕ್ಷಣಕ್ರಮವನ್ನು CBCS ಪಠ್ಯಕ್ರಮದ ಅಡಿಯಲ್ಲಿ ಪರಿಚಯಿಸಲಾಗಿದ್ದು, ಅವುಗಳನ್ನು ಸೆಮಿಸ್ಟರ್ ಪದ್ದತಿಯಲ್ಲಿ ನಡೆಸಲಾಗುತ್ತಿದೆ. ದೂರ ಶಿಕ್ಷಣ ODL & OL ನ ಪದ್ದತಿಯನ್ನು 2020 ಅನುಬಂಧ–06 ರಲ್ಲಿನ ಟೇಬಲ್–02ರಲ್ಲಿ ವ್ಯಕ್ತವಾಗಿರುವ ಪ್ರಕಾರ ಪ್ರತಿ ಪತ್ರಿಕೆಗೆ ನಿದಗಿಯಾಗಿರುವ ಅನ್ನು ಶೇ.10% ರಷ್ಟು ಸಂಪರ್ಕ ಕಾರ್ಯಕ್ರಮಗಳನ್ನು ನಡೆಸಬೇಕಾಗಿರುವುದು ಕಡ್ಡಾಯವಾಗಿರುತ್ತೆ. ಎಂ.ಎ/ಎಂ.ಕಾಂ ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್‌ನ ಸಂಪರ್ಕ ಕಾರ್ಯಕ್ರಮಗಳನ್ನು ನಡೆಸಬೇಕಾಗಿರುತ್ತೆ. ಸಂಪರ್ಕ ಕಾರ್ಯಕ್ರಮಗಳಿಗೆ ಅಂದಾಜು 150 ಗಂಟೆಗಳು(ಎರಡು ಸೆಮಿಸ್ಟರ್ ಒಳಗೊಂಡಂತೆ) ಸಂಪರ್ಕ ಕಾರ್ಯಕ್ರಮಗಳನ್ನು ಆಯ್ದ ಪ್ರಾದೇಶಿಕ ಕೇಂದ್ರಗಳಲ್ಲಿ ನಡೆಸಬೇಕಾಗಿರುತ್ತದೆ,

ಮುಂದುವರೆದು ಇದಕ್ಕೆ ಪ್ರಸ್ತುತ ವ್ಯಯಿಸುತ್ತಿದ್ದ ಮೊತ್ತವು ದ್ವಿಗುಣಗೊಳ್ಳುತ್ತಿರುವುದರಿಂದ ಸದರಿ ವಿಷಯದ ಬಗ್ಗೆ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಚರ್ಚೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ

**ತೀರ್ಮಾನ: ಎಂ.ಎ / ಎಂ.ಕಾಂ ಸಂಪರ್ಕ ತರಗತಿಗಳ ಕಾಲಾವಧಿಗೆ ಸಂಬಂಧಿಸಿದಂತೆ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಯಿತು.**

1. **ನಿಗಧಿಪಡಿಸಿರುವ ಕ್ರೆಡಿಟ್ ಆಧಾರಿತ ತರಗತಿಗಳಲ್ಲಿ 60% Offline ಮತ್ತು 40% Online ಮೂಲಕ ಸಂಪರ್ಕ ತರಗತಿಗಳನ್ನು ನಡೆಸುವುದು.**
2. **60% Offline ತರಗತಿಗಳಲ್ಲಿ 50% ತರಗತಿಗಳನ್ನು ನಮ್ಮ ವಿಶ್ವವಿದ್ಯಾನಿಲಯದ ಅಧ್ಯಾಪಕರು ತೆಗೆದುಕೊಳ್ಳಬಹುದಾಗಿದೆ ಉಳಿಕೆ 50% ತರಗತಿಗಳಿಗೆ ಆಯಾಯ ಸ್ಥಳಗಳಲ್ಲಿನ ಬಾಹ್ಯ ಅಧ್ಯಾಪಕರುಗಳನ್ನು ನೇಮಿಸಿಕೊಂಡು Offline ತರಗತಿಗಳನ್ನು ನಡೆಸಬಹುದಾಗಿದೆ.**
3. **ಕನಿಷ್ಠ 80 Arts ವಿದ್ಯಾರ್ಥಿಗಳು ಹಾಗೂ ಕನಿಷ್ಠ 60 ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಇರುವ ಕಡೆ ಕೇಂದ್ರವನ್ನು ಆಯ್ಕೆ ಮಾಡಿ ತರಗತಿಗಳನ್ನು ನಡೆಸುವುದು.**

*********

**ವಿಷಯ ಸಂಖ್ಯೆ : 60.10**

ವಿಷಯ : ಕರಾಮುವಿಯಲ್ಲಿ Center for Research on Social Inclusion ಅನ್ನು ಆರಂಭಿಸಿರುವುದರ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ ಎಂಬ ದ್ಯೇಯವಾಕ್ಯದೊಂದಿಗೆ ಆರಂಭವಾಗಿದ್ದು Reaching the Unreached ಎಂಬ ಪರಿಕಲ್ಪನೆಯಡಿ ಕಾರ್ಯ ನಿರ್ವಹಿಸುತ್ತಿದ್ದು. ಸಮಾಜದ ಎಲ್ಲ ವರ್ಗ, ವಯೋಮಾನ, ಲಿಂಗ, ವಾಸ ಸ್ಥಳಗಳನ್ನು ತಲುಪಲು ಒಂದು ವಿಶೇಷ ಘಟಕದ ಅವಶ್ಯಕತೆ ಇದ್ದು ಈ ಕೇಂದ್ರವು ಈ ಎಲ್ಲ ಜನರನ್ನು ತಲುಪುವ ನಿಟ್ಟಿನಲ್ಲಿ ಸೂಕ್ತ ಯೋಜನೆಗಳನ್ನು ರೂಪಿಸಿ ಅವುಗಳ ಜಾರಿಗೆ ಪ್ರಯತ್ನಿಸಬೇಕಿರುತ್ತದೆ.

ಈ ಹಿನ್ನಲೆಯಲ್ಲಿ ದಿನಾಂಕ 25.10.2022 ರಂದು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಂಶೋಧನಾ ಮತ್ತು ಅಭಿವೃದ್ಧಿ ಘಟಕದ ಅಡಿಯಲ್ಲಿ Center for Research on Social Inclusion ಅನ್ನು ಸ್ಥಾಪಿಸಲಾಗಿದ್ದು ಹಾಗೂ ಅದಕ್ಕೆ Dr. Jayapal. H. R, ರವರನ್ನು Nodal ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

Center for Research on Social Inclusion ಅನ್ನು ಆರಂಭಿಸಿರುವುದಕ್ಕೆ ಮತ್ತು Nodal ಅಧಿಕಾರಿಯನ್ನಾಗಿ ನೇಮಿಸಲಾಗಿರುವ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಹಾನೆಗೆ ತರುತ್ತಾ ಸದರಿ ವಿಷಯಗಳನ್ನು ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ: ಅನುಸಮರ್ಥನೆಗೊಳಿಸಲಾಯಿತು.**

*****

**ವಿಷಯ ಸಂಖ್ಯೆ: 60.11**

ವಿಷಯ : ಕರಾಮುವಿಯಲ್ಲಿ Intellectual Property Cell ಅನ್ನು ಸ್ಥಾಪಿಸಿರುವುದರ ಬಗ್ಗೆ.

*****

ವಿಶ್ವವಿದ್ಯಾನಿಲಯದ ಅಭಿವೃದಿಗಾಗಿ Intellectual Property Cell ಅನ್ನು ಈ ಕೆಳಕಂಡ ಉದ್ದೇಶಗಳಿಗಾಗಿ ಆರಂಭಿಸಲಾಗಿರುತ್ತದೆ.

1. ವಿವಿಯ ಬೌದ್ದಿಕ ಆಸ್ತಿ ಸಂರಕ್ಷಿಸುವುದು.
2. ಬೌದ್ದಿಕ ಆಸ್ತಿಗಳ ಬಗ್ಗೆ ಅಧ್ಯಾಪಕರು ಹಾಗೂ ಸಂಶೋಧನಾರ್ಥಿಗಳಲ್ಲಿ ಅರಿವು ಮೂಡಿಸುವುದು.
3. ಅಧ್ಯಾಪಕರು ಹಾಗೂ ಸಂಶೋಧನಾರ್ಥಿಗಳು Patent ಪಡೆಯಲು ಇಚ್ಚಿಸಿದಲ್ಲಿ ಅದಕ್ಕರ ಅಗತ್ಯ ಸೇವೆಗಳನ್ನು ಅಲ್ಲಿಸುವುದು.
4. ವಿವಿಯ ವತಿಯಿಂದ ಅಭಿವೃದ್ದಿ ಪಡಿಸಿರುವ ಸ್ವಯಂ ಕಲಿಕ ಸಾಮಗ್ರಿಗಳಿಗೆ Copy right ಪಡೆದುಕೋಳ್ಳುವುದು.
5. ಸಂಶೋಧಕರಿಗೆ ತಾಂತ್ರಿಕ ಹಾಗೂ ಆರ್ಥಿಕ ಸಹಾಯ ನೀಡುವುದು.
6. ವಿವಿಯ Logo ಸಂರಕ್ಷಣೆ.

7. Intelluctual Property ಸಿದ್ಧಪಡಿಸುವುದು.
8. ಈ ಬಗ್ಗೆ ಅರಿವು ಮೂಡಿಸಲು workshop, Seminar, Training ಏರ್ಪಡಿಸುವುದು.

ಈ ಮೇಲ್ಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ದಿನಾಂಕ 02.07.2022 ರಂದು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಂಶೋಧನಾ ಮತ್ತು ಅಭಿವೃದ್ಧಿ ಘಟಕದ ಅಡಿಯಲ್ಲಿ Intellectual Property Cell ಅನ್ನು ಸ್ಥಾಪಿಸಲಾಗಿದ್ದು ಹಾಗೂ ಅದಕ್ಕೆ Dr. Ananda Gowda. N, ರವರನ್ನು Nodal ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

59ನೇ ಶೈಕ್ಷಣಿಕ ಮಂಡಳಿಯ ಶಿಫಾರಸ್ಸಿನಂತೆ Intellectual Property Cell ಅನ್ನು ಆರಂಭಿಸಿರುವುದಕ್ಕೆ ಮತ್ತು Nodal ಅಧಿಕಾರಿಯನ್ನಾಗಿ ನೇಮಿಸಲಾಗಿರುವ ವಿಷಯವನ್ನು ಅವಗಹಾನೆಗೆ ತರುತ್ತಾ ಸದರಿ ವಿಷಯಗಳನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ: ಕರಾಮುವಿಯಲ್ಲಿ Intellectual Property Cell ಅನ್ನು ಸ್ಥಾಪಿಸಿರುವ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.**

*********

**ವಿಷಯ ಸಂಖ್ಯೆ: 60.12**

**ವಿಷಯ :** ಹೊಸದಾಗಿ ಪ್ರಾರಂಭಿಸಲಾಗಿರುವ ಎಂ.ಎಸ್ಸಿ. ಪ್ರಾಣಿಶಾಸ್ತ್ರ ಶಿಕ್ಷಣಕ್ರಮ ಮತ್ತು ಬಿ.ಎಸ್ಸಿ ಪ್ರಾಣಿಶಾಸ್ತ್ರ ವಿಷಯದ ಪಿಪಿಆರ್ ಸಿದ್ಧಪಡಿಸಿ ಯುಜಿಸಿ ಯಿಂದ ಅನುಮೋದನೆ ಪಡೆದಿರುವ ಬಗ್ಗೆ.

******

2021–22ನೇ ಸಾಲಿನಲ್ಲಿ ಹೊಸದಾಗಿ M.Sc., Zoology ವಿಷಯಕ್ರಮಕ್ಕೆ PPR ಸಿದ್ಧಪಡಿಸಿ UGC ಯಿಂದ ಅನುಮೋದನೆ ಪಡೆಯಲಾಗಿರುತ್ತದೆ ಮತ್ತು Statute Governing Establishment of Schools of Studies ನಲ್ಲಿ ಪ್ರಾಣಿಶಾಸ್ತ್ರ ವಿಭಾಗವನ್ನು ಪ್ರತ್ಯೇಕವಾಗಿ ತೋರಿಸಿ ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿರುತ್ತದೆ ಹಾಗೂ B.Sc., ಕಾರ್ಯಕ್ರಮದಲ್ಲಿಯೂ ಸಹ ಪ್ರಾಣಿಶಾಸ್ತ್ರ ವಿಷಯವನ್ನು ಆರಂಬಿಸಲಾಗಿದೆ.

M.Sc.,Zoology ವಿಷಯಕ್ರಮವನ್ನು ಜೈವಿಕ ತಂತ್ರಜ್ಞಾನ ವಿಭಾಗದಿಂದ ಆರಂಭಿಸಲಾಗಿರುತ್ತದೆ. ಸದರಿ ಪ್ರಾಣಿಶಾಸ್ತ್ರ ವಿಭಾಗಕ್ಕೆ ಗುತ್ತಿಗೆ ಆಧಾರದ ಮೇಲೆ ಸಹಾಯಕ ಪ್ರಾಧ್ಯಾಪಕರನ್ನು ಮತ್ತು ಡಾ. ಎನ್. ಜಿ. ರಾಜು. ಸಹಾಯಕ ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರನ್ನು ಕಾರ್ಯಕ್ರಮ ಸಂಯೋಜನಾಧಿಕಾರಿಯಾಗಿ ನೇಮಿಸಲಾಗಿದೆ.

ಮುಂದುವರೆದು ಆಡಳಿತದ ಸುಗಮ ನಿರ್ವಹಣೆ ದೃಷ್ಟಿಯಿಂದ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗವನ್ನು ಪ್ರತ್ಯೇಕವಾಗಿ ನಿರ್ವಹಿಸಲು ಹಾಗೂ ಸದರಿ ವಿಭಾಗಕ್ಕೆ ಡಾ. ಎನ್. ಜಿ. ರಾಜು ರವರನ್ನು ಪ್ರಭಾರ ಮುಖ್ಯಸ್ಥರನ್ನಾಗಿ ನೇಮಿಸಲು ಅನುಮೋದನೆ ಕೋರಿದೆ ಹಾಗೂ ಪ್ರಾಣಿಶಾಸ್ತ್ರ ವಿಭಾಗ ಸ್ಥಾಪನೆ ಸಂಬಂಧ ಅನುಸಮರ್ಥನೆ ಕೋರಿ ಸ್ಥಾಪನಾ ಅಧಿಸೂಚನೆ ಹೊರಡಿಸಲು ಶೈಕ್ಷಣಿಕ ಮಂಡಳಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸ್ಥಾಪನೆಗೊಳಿಸಿರುವ ಸಂಬಂಧ ಅಧಿಸೂಚನೆ ಹೊರಡಿಸಲು ತೀರ್ಮಾನಿಸಲಾಯಿತು.**

******

**ವಿಷಯ ಸಂಖ್ಯೆ: 60.13**

**ವಿಷಯ** : ಹೊಸದಾಗಿ ಪ್ರಾರಂಭಿಸಲಾಗಿರುವ ಎಂ.ಎಸ್ಸಿ. ಸಸ್ಯಶಾಸ್ತ್ರ ಶಿಕ್ಷಣಕ್ರಮ ಮತ್ತು ಬಿ.ಎಸ್ಸಿ ಸಸ್ಯಶಾಸ್ತ್ರ ವಿಷಯದ ಪಿಪಿಆರ್ ಸಿದ್ಧಪಡಿಸಿ ಯುಜಿಸಿ ಯಿಂದ ಅನುಮೋದನೆ ಪಡೆದಿರುವ ಬಗ್ಗೆ.

******

2021–22ನೇ ಸಾಲಿನಲ್ಲಿ ಹೊಸದಾಗಿ M.Sc., Botany ವಿಷಯ ಕ್ರಮಕ್ಕೆ PPR ಸಿದ್ಧಪಡಿಸಿ UGC ಯಿಂದ ಅನುಮೋದನೆ ಪಡೆಯಲಾಗಿರುತ್ತದೆ ಮತ್ತು Statute Governing Establishment of Schools of Studies ನಲ್ಲಿ ಸಸ್ಯಶಾಸ್ತ್ರ ವಿಭಾಗವನ್ನು ಪ್ರತ್ಯೇಕವಾಗಿ ತೋರಿಸಿ ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿರುತ್ತದೆ ಹಾಗೂ B.Sc., ಕಾರ್ಯಕ್ರಮದಲ್ಲಿಯೂ ಸಹ ಸಸ್ಯಶಾಸ್ತ್ರ ವಿಷಯವನ್ನು ಆರಂಬಿಸಲಾಗಿದೆ.

ಒ.ಖಿಛಿ., ೫ಠಣಚಿಟಿಥಿ ವಿಷಯ ಕ್ರಮವನ್ನು ಸೂಕ್ಷ್ಮಜೀವಶಾಸ್ತ್ರ ವಿಭಾಗದಿಂದ ಆರಂಭಿಸಲಾಗಿರುತ್ತದೆ. ಸದರಿ ಸಸ್ಯಶಾಸ್ತ್ರ ವಿಭಾಗಕ್ಕೆ ಗುತ್ತಿಗೆ ಆಧಾರದ ಮೇಲೆ ಸಹಾಯಕ ಪ್ರಾಧ್ಯಾಪಕರನ್ನು ಮತ್ತು ಡಾ. ನಿರಂಜನ್ ರಾಜ್ ಎಸ್. ಸಹಾಯಕ ಪ್ರಾಧ್ಯಾಪಕರು, ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರನ್ನು ಕಾರ್ಯಕ್ರಮ ಸಂಯೋಜನಾಧಿಕಾರಿಯಾಗಿ ನೇಮಿಸಲಾಗಿದೆ.

ಮುಂದುವರೆದು ಆಡಳಿತದ ಸುಗಮ ನಿರ್ವಹಣೆ ದೃಷ್ಟಿಯಿಂದ ಸಸ್ಯಶಾಸ್ತ್ರ ಅಧ್ಯಯನ ವಿಭಾಗವನ್ನು ಪ್ರತ್ಯೇಕವಾಗಿ ನಿರ್ವಹಿಸಲು ಹಾಗೂ ಸದರಿ ವಿಭಾಗಕ್ಕೆ ಡಾ. ನಿರಂಜನ್ ರಾಜ್ ಎಸ್. ರವರನ್ನು ಪ್ರಭಾರ ಮುಖ್ಯಸ್ಥರನ್ನಾಗಿ ನೇಮಿಸಲು ಅನುಮೋದನೆ ಕೋರಿದೆ ಹಾಗೂ ಸಸ್ಯಶಾಸ್ತ್ರ ವಿಭಾಗ ಸ್ಥಾಪನೆ ಸಂಬಂಧ ಅನುಸಮರ್ಥನೆ ಕೋರಿ ಸ್ಥಾಪನಾ ಅಧಿಸೂಚನೆ ಹೊರಡಿಸಲು ಶೈಕ್ಷಣಿಕ ಮಂಡಳಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : ಹೊಸದಾಗಿ ಪ್ರಾರಂಭಿಸಲಾಗಿರುವ ಎಂ.ಎಸ್ಸಿ. ಸಸ್ಯಶಾಸ್ತ್ರ ಶಿಕ್ಷಣಕ್ರಮ ಮತ್ತು ಬಿ.ಎಸ್ಸಿ ಸಸ್ಯಶಾಸ್ತ್ರ ವಿಷಯದ ಪಿಪಿಆರ್ ಸಿದ್ಧಪಡಿಸಿ ಯುಜಿಸಿ ಯಿಂದ ಅನುಮೋದನೆ ಪಡೆದಿರುವ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.**

******

**ವಿಷಯ ಸಂಖ್ಯೆ: 60.14**

ವಿಷಯ : ಕರಾಮುವಿಯಲ್ಲಿ Center for Innovation and Incubation ನ ಅಡಿಯಲ್ಲಿ Best Project Award ನೀಡುವುದರ ಬಗ್ಗೆ.

*****

ಸ್ನಾತಕೋತ್ತರ ವಿದ್ಯಾರ್ಥಿಗಳಲ್ಲಿ Innovative Culture ಅನ್ನು ಹೆಚ್ಚಿಸಿ, ಉತ್ಕೃಷ್ಟ Projectಗಳನ್ನು ಹೆಚ್ಚಿಸುವ ಸಲುವಾಗಿ, ಉತ್ತಮ Projectಗಳಿಗೆ Best Project Award ನೀಡಲು ಉದ್ದೇಶಿಸಿ ಅನುಮೋದನೆ ಕೋರಿದೆ ಪ್ರಸ್ತುತ 11 ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಎರಡನೇ ವರ್ಷದ ವಿದ್ಯಾರ್ಥಿಗಳು Project ಮಾಡುತ್ತಿದ್ದು, ಮುಂದಿನ ಶೈಕ್ಷಣಿಕ ಸಾಲಿನಲ್ಲಿ 18 ಕಾರ್ಯಕ್ರಮಗಳಲ್ಲಿ ಹಾಗೂ 24– 25 ಸಾಲಿನಿಂದ 21 ಕಾರ್ಯಕ್ರಮಗಳ ವಿದ್ಯಾರ್ಥಿಗಳು Project ಮಾಡಬೇಕಿರುತ್ತದೆ. ಈ ಹಿನ್ನಲೆಯಲಿ ಸದರಿ ಅಂಶಗಳನ್ನು ಅವಗಾಹನೆಗೆ ತರುತ್ತಾ Center for Innovation and Incubation ಅಡಿಯಲ್ಲಿ Best Project Award ನೀಡುವುದರ ಸಂಬಂಧ ಕೆಳಕಂಡ ಅಂಶಗಳನ್ನು ಶೈಕ್ಷಣಿಕ ಮಂಡಳಿಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ. (ವಿದ್ಯಾರ್ಥಿಗಳ ಸಂಖ್ಯೆ ಲಗತ್ತಿಸಿದ್ದೆ)

1. Best Project Award ನೀಡುವುದರ ಬಗ್ಗೆ
2. ಸದರಿ Award ಅನ್ನು ವಿಭಾಗವಾರು ನೀಡುವ ಬಗ್ಗೆ.
3. ಪ್ರತಿ ಕಾರ್ಯಕ್ರಮದ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ Award ಗಳ ಸಂಖ್ಯೆ ನಿಗದಿಪಡಿಸುವ ಬಗ್ಗೆ.
4. ವಿವಿಯ ವತಿಯಿಂದ Award Certificate ನೀಡುವ ಬಗ್ಗೆ
5. Best Project Award ಪಡೆಯುವ ವಿದ್ಯಾರ್ಥಿಗೆ Cash prize ನೀಡುವುದಾದಲ್ಲಿ ಅದರ ಮೊತ್ತದ ಬಗ್ಗೆ.

**ತೀರ್ಮಾನ : ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ನೀಡಲುದ್ದೇಶಿಸಿರುವ** Center for Innovation and Incubation ನ ಅಡಿಯಲ್ಲಿ Best Project Award ನೀಡುವ ಸಂಬಂಧ **ವಿಷಯವಾರು ವಿಷಯ ತಜ್ಞರ ಸಮಿತಿಯನ್ನು ರಚಿಸಿ ಸಮಿತಿಯ ವರದಿಯ ಆಧಾರದ ಮೇಲೆ** ತೀರ್ಮಾನ ಕೈಗೊಳ್ಳುವುದು ಎಂದು ತೀರ್ಮಾನಿಸಲಾಯಿತು.

******

**ವಿಷಯ ಸಂಖ್ಯೆ: 60.15**

ವಿಷಯ : ಕರಾಮುವಿಯಲ್ಲಿ Center for Innovation and Incubation ಅನ್ನು ಸ್ಥಾಪಿಸಿರುವುದರ ಬಗ್ಗೆ.

*****

ವಿಶ್ವವಿದ್ಯಾನಿಲಯದ ಅಭಿವೃದಿಗಾಗಿ Center for Innovation and Incubation ಅನ್ನು ಈ ಕೆಳಕಂಡ ಉದ್ದೇಶಗಳಿಗಾಗಿ ಆರಂಭಿಸಲಾಗಿರುತ್ತದೆ.

1. ಉದ್ಯಮಿಗಳಾಗುವ ಉತ್ಸಾಹ ತುಂಬುವುದು.
2. ತಂತ್ರಜ್ಞಾನ ಆಧಾರಿತ ಉದ್ಯಮಗಳ ಅರಂಭಕ್ಕೆ ಸಹಾಯ ಮಾಡುವುದು.
3. ಸಂಶೋಧನ ಫಲಿತಾಂಶಗಳ ವಾಣಿಜ್ಜೀಕರಣಕ್ಕೆ ಪ್ರೊತ್ಸಾಹ ನೀಡುವುದು.

**ಇದರ ಅನ್ವಯ ಈ ಘಟಕವು ನೆರವೇರಿಸಬೇಕಾದ ಕಾರ್ಯಗಳೆಂದರೆ.**

1. ಮೈಸೂರಿನ ವಿವಿಧ ಉದ್ಯಮಗಳ ಜೊತೆ ಸಂಪರ್ಕ ಬೆಳಸಿಕೋಳ್ಳುವುದು.
2. ವಿದ್ಯಾರ್ಥಿಗಳು, ಹಳೇ ವಿದ್ಯಾರ್ಥಿಗಳು Innovative ಯೋಜನೆಗಳಿಗೆ ಪ್ರೊತ್ಸಾಹ ನೀಡುವುದು.
3. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಯ ಇಂತಹ ಪ್ರಯತ್ನಕೆ ನೀಡುವ ಸೌಲಭ್ಯಗಳನ್ನು ಸಾಕಾರ ಪಡಿಸಿಕೊಳ್ಳುವುದು.
4. ವಿವಿಧ ಪೀಠಗಳ ಮೂಲಕ Innovative ಕಾರ್ಯಕ್ರಮಗಳನ್ನು ಮಾಡುವುದು.
5. ಹೊಸ ಉದ್ಯಮಗಳಿಗೆ ಸಂಬಂಧಿಸಿದಂತೆ ತರಬೇತಿ ಕಾರ್ಯಗಾರಗಳನ್ನು ನೆಡಸುವುದು.
6. ವಿವಿಯ ಭೋಧಕರು Consultancy projectಗಳನ್ನು ಕೈಗೆತ್ತಿಕೊಳ್ಳಲು ಸಹಕಾರ ನೀಡುವುದು.

ಈ ಮೇಲ್ಕಂಡ ಕಾರ್ಯಗಳನ್ನು ಅನುಷ್ಠಾನಗೊಳಿಸಲು ದಿನಾಂಕ 02.07.2022 ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಂಶೋಧನಾ ಮತ್ತು ಅಭಿವೃದ್ಧಿ ಘಟಕದ ಅಡಿಯಲ್ಲಿ Center for innovation and Incubation ಅನ್ನು ಸ್ಥಾಪಿಸಲಾಗಿದ್ದು ಹಾಗೂ ಅದಕ್ಕೆ Dr. Nataraju Angaswamy, ರವರನ್ನು Nodal ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

59ನೇ ಶೈಕ್ಷಣಿಕ ಮಂಡಳಿಯ ಶಿಫಾರಸ್ಸಿನಂತೆ Center for innovation and Incubation ಅನ್ನು ಆರಂಭಿಸಿರುವುದಕ್ಕೆ ಮತ್ತು Nodal ಅಧಿಕಾರಿಯನ್ನಾಗಿ ನೇಮಿಸಲಾಗಿರುವ ವಿಷಯವನ್ನು ಅವಗಹಾನೆಗೆ ತರುತ್ತಾ ಸದರಿ ವಿಷಯಗಳನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ: ಕರಾಮುವಿಯಲ್ಲಿ Center for Innovation and Incubation ಅನ್ನು ಸ್ಥಾಪಿಸಿರುವ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.**

******

**ವಿಷಯ ಸಂಖ್ಯೆ: 60.16**

ವಿಷಯ: ವಿಶ್ವವಿದ್ಯಾನಿಲಯದಲ್ಲಿ ರಚನೆಗೊಂಡಿರುವ ಮಾನವ ನೈತಿಕ ಸಮಿತಿಯ ನಡಾವಳಿಯ ಕುರಿತು

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ICMR ಮಾರ್ಗಸೂಚಿ ಅನ್ವಯ ಮಾನವ ನೈತಿಕ ಸಮಿತಿಯು ದಿನಾಂಕ; 06.03.2022 ರಂದು ಸಭೆ ನಡೆಸಿ ಸಿದ್ಧಪಡಿಸಿರುವ Guidelines ಮತ್ತು Professional Form ಗಳನ್ನು ಹಾಗೂ ಸಭೆಯ ನಡಾವಳಿಯನ್ನು ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : ಅನುಮೋದಿಸಲಾಯಿತು**

******

**<u>ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿತವಾದ ಇತರೆ ವಿಷಯಗಳು</u>**

ಮಾನ್ಯ ಕುಲಪತಿಗಳು ಮಾತನಾಡಿ ಮುಂದಿನ ದಿನಗಳಲ್ಲಿ ಅವಶ್ಯ ಸಂದರ್ಭಗಳಲ್ಲಿ ಮಾತ್ರ ಟೇಬಲ್ ಅಜೆಂಡವನ್ನು ಮಂಡಿಸಬೇಕು ಮತ್ತು ಅದು ಕಾರ್ಯಸೂಚಿಯ ಸಂಖ್ಯೆ 1/4 ಭಾಗದಷ್ಟಿರ ಬೇಕು ಈ ಬಗ್ಗೆ ಡೀನ್ (ಶೈಕ್ಷಣಿಕ) ವಿಭಾಗದ ಉಪಕುಲಸಚಿವರು ಗಮನಿಸುವಂತೆ ತಿಳಿಸಿದರು ಹಾಗೂ ಅನುಸಮರ್ಥನೆಗಾಗಿ ವಿಷಯ ಮಂಡಿಸುವ ಪ್ರಕ್ರಿಯೆಯನ್ನು ತುರ್ತು ಸಂದರ್ಭಗಳಲ್ಲಿ ಮೇಲಾಧಿಕಾರಿಗಳ ಅನುಮತಿ ಪಡೆದು ಅನುಸಮರ್ಥನೆಗೆ ವಿಷಯ ಮಂಡಿಸಬೇಕು ಎಂದು ತಿಳಿಸಿದರು.

**ವಿಷಯ ಸಂಖ್ಯೆ: 60.17**

ವಿಷಯ: ವಿಶ್ವವಿದ್ಯಾನಿಲಯದಲ್ಲಿ Electoral Literacy Club ಗೆ ನೋಡಲ್ ಅಧಿಕಾರಿ ನೇಮಿಸಿರುವುದನ್ನು ಶೈಕ್ಷಣಿಕ ಮಂಡಳಿಯಲ್ಲಿ ಅನು ಸಮರ್ಥನೆ ಪಡೆಯುವ ಬಗ್ಗೆ.
ಉಲ್ಲೇಖ: ಸಂಖ್ಯೆ: ಕರಾಮುವಿ/ಓಂಂಅ/03/2021–22, ದಿನಾಂಕ: 27.10.2022.

*******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಓಂಂಅ ಮಾನ್ಯತೆಯನ್ನು ಪಡೆಯುವ ನಿಟ್ಟಿನಲ್ಲಿ Electoral Literacy Clubನ್ನು ಸ್ಥಾಪನೆ ಮಾಡುವುದು ಅವಶ್ಯಕವಾಗಿರುತ್ತದೆ. ಸದರಿ ಘಟಕವನ್ನು ಸ್ಥಾಪನೆ ಮಾಡಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಡಾ. ಕೃಷ್ಣಪ್ಪ ಜಿ. ನಿಂಬಕ್ಕನವರ್, ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಶೈಕ್ಷಣಿಕ ವಿಭಾಗದ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ Electoral Literacy Club ನೋಡಲ್ ಅಧಿಕಾರಿಯಾಗಿ ನೇಮಕ ಮಾಡಲಾಗಿದೆ.
ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಲು, ಅನು ಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ : ಅನುಸಮರ್ಥನೆಗೊಳಿಸಲಾಯಿತು.**

******

**ವಿಷಯ ಸಂಖ್ಯೆ: 60.18**

ವಿಷಯ: ಕರಾಮುವಿಯ 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳಿಗೆ ತಾತ್ಕಾಲಿಕ ಆಯ್ಕೆಯಾಗಿ ಪಿಹೆಚ್.ಡಿ. ಪ್ರವೇಶಾತಿ ಶುಲ್ಕ ಪಾವತಿಸಿದ ದಿನಾಂಕದಿಂದಲೇ ತಾತ್ಕಾಲಿಕ ಪ್ರವೇಶಾತಿ ಪಡೆದ ದಿನಾಂಕವೆಂದು ಪರಿಗಣಿಸಿರುವ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿರುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2018–19ನೇ ಶೈಕ್ಷಣಿಕ ಸಾಲಿನ ಪಿಹೆಚ್.ಡಿ. ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, KSOU Ph.D Ordinance 2012(II Amendment 2019)ರ ಅನ್ವಯ ಅರ್ಹ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ಪ್ರವೇಶಾತಿ ನೀಡಿದ್ದು, ಸದರಿ ವಿದ್ಯಾರ್ಥಿಗಳಿಗೆ ವಿಭಾಗಗಳಲ್ಲಿ RAC ಸಭೆ ನಡೆಸಿ ಸಭಾ ನಡಾವಳಿಯನ್ನು PG BOS ಸಭೆಯಲ್ಲಿ ಅನುಮೋದನೆ ಪಡೆದು PG BOS ನಡೆದ ದಿನಾಂಕವನ್ನು ಪಿಹೆಚ್.ಡಿ ತಾತ್ಕಾಲಿಕ ನೋಂದಣಿ ದಿನಾಂಕವೆಂದು ಪರಿಗಣಿಸಲಾಗಿತ್ತು. ಪ್ರಸ್ತುತ KSOU Ph.D Ordinance 2012 (III Amendment 2021)ರ ಸೆಕ್ಷನ್ 11.2ರಲ್ಲಿ (ಬಾವುಟ–'ಅ') ಹಾಗೂ ಸಬ್‌ಸೆಕ್ಷನ್ 32.1ರೀತ್ಯಾ (ಬಾವುಟ–'ಆ') Ph.D ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪಡೆದ ದಿನಾಂಕವನ್ನು ತಾತ್ಕಾಲಿಕ ನೋಂದಣಿ ದಿನಾಂಕವೆಂದು ಪರಿಗಣಿಸಲಾಗಿದೆ. ಅದರಂತೆಯೇ, 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ. ಕಾರ್ಯಕ್ರಮಗಳಿಗೆ ತಾತ್ಕಾಲಿಕವಾಗಿ ಆಯ್ಕೆಯಾಗಿ ಶುಲ್ಕ ಪಾವತಿಸಿದ ದಿನಾಂಕವನ್ನು ಪ್ರವೇಶಾತಿ ದಿನಾಂಕವೆಂದು ಪರಿಗಣಿಸುವ ಬಗ್ಗೆ ದಿನಾಂಕ: 01–07–2022ರಂದು ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಗಳು ಮಾರ್ಗದರ್ಶಕರ ಮೂಲಕ ಮನವಿಯನ್ನು ಸಲ್ಲಿಸಿರುತ್ತಾರೆ. (ಬಾವುಟ–'ಇ')

ಸದರಿ ಮನವಿಯನ್ನು ಪರಿಗಣಿಸಿ, ಮೂರು ಬಾಹ್ಯ ಪರಿಣಿತರನ್ನು (ಉಪಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು) ಹಾಗೂ R & D Cell Director ರವರನ್ನು ಸಂಚಾಲಕರನ್ನಾಗಿ ಒಳಗೊಂಡಂತೆ ಉಪಸಮಿತಿಯನ್ನು ಮಾನ್ಯ ಕುಲಪತಿಗಳು ದಿನಾಂಕ:27–07–2022ರಂದು ರಚಿಸಲು ಅನುಮೋದನೆ ನೀಡಿದ್ದು, ಈ ಅನುಮೋದನೆಯನ್ವಯ, ಸಂಖ್ಯೆ: ಕರಾಮುವಿ/ ಡೀನ್(ಶೈಕ್ಷಣಿಕ)/ಡಿಎಸಿ–07/760/2022–23, ದಿನಾಂಕ:07–09–2022ರಂದು ಕಚೇರಿ ಆದೇಶವನ್ನು ಹೊರಡಿಸಲಾಗಿರುತ್ತದೆ. (ಬಾವುಟ–'ಈ')

ಈ ಕಚೇರಿ ಆದೇಶದನ್ವಯ ದಿನಾಂಕ: 31–10–2022ರಂದು ಉಪಸಮಿತಿ ಸಭೆಯನ್ನು ಮಾನ್ಯ ಕುಲಪತಿಗಳ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದು, (ಬಾವುಟ–'ಉ') ಸದರಿ ಸಭೆಯಲ್ಲಿ ಒಬ್ಬರು ಬಾಹ್ಯ ಪರಿಣಿತರು ಹಾಜರಾಗಿ ಮತ್ತೆ ಇಬ್ಬರು ಬಾಹ್ಯ ಸದಸ್ಯರುಗಳು Online ಮುಖಾಂತರ ಸಭೆಗೆ ಹಾಜರಿದ್ದು, ಈ ಸಭೆಯಲ್ಲಿ, ಕರಾಮುವಿಯಲ್ಲಿ 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ. ಕಾರ್ಯಕ್ರಮಗಳಿಗೆ ತಾತ್ಕಾಲಿಕವಾಗಿ ಆಯ್ಕೆಯಾಗಿ ಶುಲ್ಕ ಪಾವತಿಸಿದ ದಿನಾಂಕವನ್ನು ಪ್ರವೇಶಾತಿ ದಿನಾಂಕವೆಂದು ಪರಿಗಣಿಸಿರುವ ತೀರ್ಮಾನದ ನಡಾವಳಿಗೆ (ಬಾವುಟ–'ಊ') ಮಾನ್ಯ ಕುಲಪತಿಗಳು ದಿನಾಂಕ: 05–11–2022ರಂದು ಅನುಮೋದನೆ ನೀಡಿರುತ್ತಾರೆ. ಇದರ ಆಧಾರದ ಮೇಲೆ ಸಂಖ್ಯೆ: ಕರಾಮುವಿ/ಡೀನ್(ಶೈಕ್ಷಣಿಕ)/ ಡಿಎಸಿ–07/1015/2022–23, ದಿನಾಂಕ:15–11–2022ರಂದು ಹೊರಡಿಸಿರುವ ಕಚೇರಿ ಆದೇಶದಲ್ಲಿ ಮುಂಬರುವ ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಎಂದು ನಮೂದು ಮಾಡಿ ಆದೇಶ ಹೊರಡಿಸಲಾಗಿದೆ. (ಬಾವುಟ–'ಋ')

ಆದುದರಿಂದ, ಈ ಮೇಲ್ಕಂಡ ವಿವರಗಳಿಗೆ ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

**ತೀರ್ಮಾನ : Calender of Events ಗಳ ಪ್ರಕಾರವೆ ಪ್ರಕ್ರಿಯೆ ಕೈಗೊಳ್ಳಬೇಕಿರುತ್ತದೆ ಆದರೆ ಈ ರೀತಿ Provision Registrationನ ದಿನಾಂಕವನ್ನು ಹಿಂದೂಡುವ ಬಗ್ಗೆ ಪೂರ್ಣ ವಿವರವನ್ನು ಪರಿಶೀಲಿಸಿದ ನಂತರ ನಿರ್ಣಯ ಕೈಗೊಳ್ಳವುದು ಸೂಕ್ತವೆಂದು ತೀರ್ಮಾನಿಸಿ ಈ ವಿಷಯವನ್ನು ಮುಂದೂಡಲಾಯಿತು.**

******

**ವಿಷಯ ಸಂಖ್ಯೆ: 60.19**

**ವಿಷಯ:** ಕರಾಮುವಿ ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿಯೇ ಸಾಮಾನ್ಯ ಮೌಲ್ಯಮಾಪನ ಕಾರ್ಯವನ್ನು ನಡೆಸಿ ಫಲಿತಾಂಶವನ್ನು ಪ್ರಕಟಿಸುವ ಬಗೆಗೆ.

*******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2022–23ನೇ ಸಾಲಿನಿಂದ ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ಪ್ರಾರಂಭಿಸಲಾಗಿದ್ದು ಡಿಜಿಟಲ್ ಮೌಲ್ಯಮಾಪನ ಕಾರ್ಯದಲ್ಲಿ ಯಾವುದಾದರು ತಾಂತ್ರಿಕ ಅಡಚಣೆ ಅಥವಾ ಇತರೆ ಸಮಸ್ಯೆಗಳು ಎದುರಾದ ಸಂದರ್ಭಗಳಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯಕ್ಕೆ ಬದಲಾಗಿ ಮೈಸೂರಿನ ಕೇಂದ್ರ ಕಚೇರಿಯನ್ನು ಒಳಗೊಂಡಂತೆ ಹೆಚ್ಚುವರಿಯಾಗಿ 5 ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿನ ಘಟಕಗಳಲ್ಲಿಯೂ ಸಹ ಸಾಮಾನ್ಯ (ಸ್ವಯಂ ಚಾಲಿತ) ಮೌಲ್ಯಮಾಪನ ಕಾರ್ಯವನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಸಿದ್ಧಪಡಿಸಿ ಮಂಡಿಸಿದೆ.

ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿನ ಪರೀಕ್ಷಾ ಕೇಂದ್ರಗಳ ವಿವರವಾದ ಮಾಹಿತಿಯನ್ನು "ಅನುಬಂಧ"ದಲ್ಲಿ ನೀಡಲಾಗಿದೆ.

**ತೀರ್ಮಾನ : ವಿ.ಟಿ.ಯು ಹಾಗೆ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಯಾವ ರೀತಿ ಮೌಲ್ಯಮಾಪನ ಕ್ರಮವಹಿಸಲಾಗುತ್ತಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಪಡೆದು ನಮ್ಮ ವಿಶ್ವವಿದ್ಯಾನಿಲಯದ ಪರೀಕ್ಷಾ ಕ್ರಮಕ್ಕೆ ಅನ್ವಯವಾಗುವಂತೆ ವರದಿಯನ್ನು ಸಿದ್ದಪಡಿಸಿ ಸಲ್ಲಿಸಿದಲ್ಲಿ ಹಣಕಾಸು ಅಧಿಕಾರಿಗಳನ್ನೊಳಗೊಂಡಂತೆ ಒಂದು ತಾಂತ್ರಿಕ ತಜ್ಞರ ಸಮಿತಿಯನ್ನು ರಚಿಸಿ ವಿಸ್ತ್ರತ ವರದಿಯನ್ನು ಸಿದ್ದಪಡಿಸಿ ಸಲ್ಲಿಸಿದಲ್ಲಿ ಈ ಬಗ್ಗೆ ಅಗತ್ಯ ತೀರ್ಮಾನವನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿ ವಿಷಯವನ್ನು ಮುಂದೂಡಲಾಯಿತು.**

******

**ವಿಷಯ ಸಂಖ್ಯೆ: 60.20**

ವಿಷಯ: ಸ್ನಾತಕ/ಸ್ನಾತಕೋತ್ತರ (ಸಿಬಿಸಿಎಸ್) ಪದವಿ ಕಾರ್ಯಕ್ರಮಗಳ ಪ್ರಶ್ನೆಪತ್ರಿಕೆ ಮಾದರಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗೆಗೆ.

******

2021–22ನೇ ಶೈಕ್ಷಣಿಕ ಸಾಲಿನಲ್ಲಿ (ಜನವರಿ/ಜುಲೈ ಆವೃತ್ತಿ) ಸ್ನಾತಕ/ಸ್ನಾತಕೋತ್ತರ (ಸಿಬಿಸಿಎಸ್) ಪದವಿಗಳಾದ B.Sc (General), B.Sc(Home Science), B.Sc. IT B.C.A, B.B.A., M.A Programmes, M.B.A, all M.Sc Programmes, M.Lib.I.Sc, All Post Graduation Certificate Diploma, Diploma & Certificate Programmes ಗಳ ಪ್ರಥಮ ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಬಂದಪಟ್ಟ ಅಧ್ಯಯನ ವಿಭಾಗದ ಅಧ್ಯಯನ ಮಂಡಳಿಯು (BOS) ನೀಡಿರುವ ಪ್ರಶ್ನೆಪತ್ರಿಕೆ ಮಾದರಿಯನ್ನು ಪರೀಕ್ಷಾಮಂಡಳಿಯು (BOE) ಸಿದ್ಧಪಡಿಸಿ ನೀಡಿರುತ್ತದೆ. ಪರೀಕ್ಷಾ ಮಂಡಳಿಗಳು ನೀಡಿರುವ ಪ್ರಶ್ನೆಪತ್ರಿಕೆಗಳ ಮಾದರಿಯು ಏಕರೂಪವಾಗಿರದ ಕಾರಣ ಡಿಜಿಟಲ್ ಮೌಲ್ಯಮಾಪನಕ್ಕೆ ತೊಂದರೆ ಉಂಟಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮೇಲ್ಕಂಡ ಸಿಬಿಸಿಎಸ್ ಕಾರ್ಯಕ್ರಮಗಳ ಪ್ರಶ್ನೆಪತ್ರಿಕೆ ಮಾದರಿಯನ್ನು

ಏಕರೂಪ ಮಾದರಿಯಲ್ಲಿ ಅಳವಡಿಸಿಕೊಂಡಾಗ ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ಸುಸೂತ್ರವಾಗಿ ನಿರ್ವಹಿಸಲು ಹಾಗು ವಿದ್ಯಾರ್ಥಿಗಳ ಹಿತದೃಷ್ಠಿಯಿಂದ, ಈ ಸಂಬಂಧ ಪರೀಕ್ಷಾ ವಿಭಾಗದಿಂದ ಪ್ರಶ್ನೆಪತ್ರಿಕೆ ಮಾದರಿಯನ್ನು ಸಿದ್ಧಪಡಿಸಿ ನೀಡುವ ಸಂಬಂಧ ಪ್ರಶ್ನೆಪತ್ರಿಕೆ ಮಾದರಿಯನ್ನು ಮುಂದಿನ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಲು ಅನುಮೋದನೆ ಕೋರಲಾಗಿದೆ.

**ತೀರ್ಮಾನ :** School wise question paper patern ಅನ್ನು ಸಿದ್ದಪಡಿಸುವುದು ಸೂಕ್ತ ವೆಂದು ತೀರ್ಮಾನಿಸಲಾಯಿತು.

******

**ವಿಷಯ ಸಂಖ್ಯೆ: 60.21**

**ವಿಷಯ:** **ಕೆನರಾ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ–ಅಪರೇಟೀವ್ ಬ್ಯಾಂಕ್ ಲಿಮಿಟೆಡ್ (KD CCB), ಶಿರಸಿ, ಉತ್ತರ ಕನ್ನಡ ಜಿಲ್ಲೆ ಇವರು ಜೂನಿಯರ್ ಕ್ಲರ್ಕ್ / ಜೂನಿಯರ್ ಸೂಪರ್‌ವೈಸರ್ ಹುದ್ದೆಗಳ ನೇಮಕಾತಿ ಮಾಡುವ ಸಂಬಂಧ ಲಿಖಿತ ಪರೀಕ್ಷೆಯನ್ನು ವಿಶ್ವವಿದ್ಯಾನಿಲಯದ ವತಿಯಿಂದ ನಡೆಸಿಕೊಡಲು ತಗಲುವ ಅಂದಾಜು ವೆಚ್ಚದ ವಿವರವನ್ನು ಕೋರಿರುವ ಬಗೆಗೆ.**

******

ವ್ಯವಸ್ಥಾಪಕ ನಿರ್ದೇಶಕರು, ಕೆನರಾ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ–ಅಪರೇಟೀವ್ ಬ್ಯಾಂಕ್ ಲಿಮಿಟೆಡ್ (KDCCB), ಶಿರಸಿ, ಉತ್ತರ ಕನ್ನಡ ಜಿಲ್ಲೆ ಇವರು ತಮ್ಮ ಬ್ಯಾಂಕ್ ವತಿಯಿಂದ ಖಾಲಿ ಹುದ್ದೆಗಳನ್ನು ನೇಮಾಕಾತಿ ಮಾಡಿಕೊಳ್ಳುವ ಸಂಬಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ 3500 ಅಭ್ಯರ್ಥಿಗಳಿಗೆ 200 ಅಂಕಗಳಿಗೆ ಪ್ರಶ್ನೆ ಪತ್ರಿಕೆ ರಚನೆ, Written Test, Valuation ನಡೆಸಿಕೊಡುವ ಬಗ್ಗೆ ಮಾನ್ಯ ಕುಲಪತಿಗಳಿಗೆ ಪತ್ರ ಸಂಖ್ಯೆ: ಇಖಖಿ/ಂಆಒ/14840/2022–23, ದಿನಾಂಕ 18.12.2022 ರ ಪತ್ರದಲ್ಲಿ ಮನವಿ ಮಾಡಿರುತ್ತಾರೆ. ("ಅನುಬಂಧ"ದಲ್ಲಿ ಪತ್ರ ಲಗತ್ತಿಸಿದೆ)

ಪ್ರಶ್ನೆ ಪತ್ರಿಕೆ ರಚನೆಯಿಂದ ಅರ್ಹತಾ ಪರೀಕ್ಷೆ ನಡೆಸುವ ಹಂತದ ವರೆಗಿನ ಎಲ್ಲಾ ಕಾರ್ಯಗಳನ್ನು ನಡೆಸಲು ತಗಲುವ ಅಂದಾಜು ವೆಚ್ಚದ ವಿವರವನ್ನು ಒದಗಿಸುವಂತೆ ಕೋರಿರುತ್ತಾರೆ, ಸದರಿ ಕಾರ್ಯವನ್ನು ವಿಶ್ವವಿದ್ಯಾನಿಲಯದ ವತಿಯಿಂದ ನಿರ್ವಹಿಸಿ ಪರೀಕ್ಷಾ ಕಾರ್ಯಗಳನ್ನು ಪೂರ್ಣಗೊಳಿಸಿ ನೀಡುವ ಸಂಬಂಧದ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವ ಸಂಬಂಧ ವಿಷಯ ಸಿದ್ಧಪಡಿಸಿ ಮಂಡಿಸಿದೆ.

**ತೀರ್ಮಾನ : ನಮ್ಮ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಲಿಖಿತ ಪರೀಕ್ಷೆಯನ್ನು ವಿಶ್ವವಿದ್ಯಾನಿಲಯದ ವತಿಯಿಂದ ನಡೆಸಿಕೊಡಲು ಅನುಮೋದಿಸಲಾಯಿತು.**

******

**ವಿಷಯ ಸಂಖ್ಯೆ: 60.22**

**ವಿಷಯ:** ಕರಾಮುವಿ ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿಯೇ ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ನಡೆಸಿ ಫಲಿತಾಂಶವನ್ನು ಪ್ರಕಟಿಸುವ ಬಗೆಗೆ.

*******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2022–23ನೇ ಸಾಲಿನಿಂದ ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ಪ್ರಾರಂಭಿಸಲಾಗಿದ್ದು ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳ ವಿದ್ಯಾರ್ಥಿಗಳ ಉತ್ತರ ಪುಸ್ತಕಗಳನ್ನು ಕೇಂದ್ರಸ್ಥಾನದಲ್ಲಿಯೇ ಡಿಜಿಟಲ್ ಮೌಲ್ಯಮಾಪನ ಕಾರ್ಯ ನಡೆಸಿ ಫಲಿತಾಂಶ ಪ್ರಕಟಿಸಿ ಅಂಕಪಟ್ಟಿ ವಿತರಿಸುವ ಕಾರ್ಯವು ವಿಳಂಬವಾಗುತ್ತಿರುವ ಹಿನ್ನಲೆಯಲ್ಲಿ ಇನ್ನು ಮುಂದೆ ನೂತನ ಯೋಜನೆಯನ್ನು ಜಾರಿಗೆ ತರಲು ಕೇಂದ್ರ ಕಚೇರಿಯನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ 5 ಪ್ರಾದೇಶಿಕ ಕೇಂದ್ರಗಳ ಕಚೇರಿಗಳಲ್ಲಿಯೂ ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ಪರಿಕ್ಷೆಗಳು ನಡೆಯುವ ಪ್ರಾರಂಭದ ದಿನಗಳಿಂದಲೂ ಪ್ರಾರಂಭಿಸಿ ಪರೀಕ್ಷೆ ಮುಗಿದ ಒಂದು ವಾರದೊಳಗೆ ವಿದ್ಯಾರ್ಥಿಗಳಿಗೆ ಫಲಿತಾಂಶವನ್ನು ಪ್ರಕಟಿಸುವ ಸದುದ್ದೇಶದಿಂದ ಪರೀಕ್ಷಾ ಕಾರ್ಯಗಳ ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ಮೈಸೂರಿನ ಕೇಂದ್ರ ಕಚೇರಿಯನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ 5 ಪ್ರಾದೇಶಿಕ ಕೇಂದ್ರಗಳ ಕಚೇರಿಗಳಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯ ನಡೆಸಲು ಯೋಜನೆ ರೂಪಿಸಲು ಅನುಕೂಲವಾಗುವಂತೆ ಸದರಿ ಪರಿಕ್ಷಾ ಕಾರ್ಯಗಳಿಗೆ ಅಗತ್ಯವಾಗಿ ಬೇಕಾಗಿರುವ software and hardware ಉಪಕರಣಗಳನ್ನು ಹಾಗೂ ಅವಶ್ಯಕ ಪೀಠೋಪಕರಣಗಳನ್ನು 5 ಪ್ರಾದೇಶಿಕ ಕೇಂದ್ರಗಳ ಡಿಜಿಟಲ್ ಮೌಲ್ಯಮಾಪನ ಘಟಕಗಳಿಗೆ ಹೆಚ್ಚುವರಿಯಾಗಿ ಒದಗಿಸುವ ಸಂಬಂಧದ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಸಿದ್ಧಪಡಿಸಿ ಮಂಡಿಸಿದೆ.

ಹೆಚ್ಚುವರಿಯಾಗಿ ನೂತನ ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿರುವ ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿನ ಪರೀಕ್ಷಾ ಕೇಂದ್ರಗಳ ವಿವರವಾದ ಮಾಹಿತಿಯನ್ನು "ಅನುಬಂಧ"ದಲ್ಲಿ ನೀಡಲಾಗಿದೆ.

ತೀರ್ಮಾನ : **ಹೆಚ್ಚಿನ ಮಾಹಿತಿಯೊಂದಿಗೆ ವಿಷಯವನ್ನು ಮುಂದಿನ ಸಭೆಗೆ ಮಂಡಿಸುವಂತೆ ತಿಳಿಸಿ ವಿಷಯವನ್ನು ಮುಂದೂಡಲಾಯಿತು. ಶೀಘ್ರವಾಗಿ ಮೌಲ್ಯಮಾಪನ ಕಾರ್ಯ ಪೂರ್ಣಗೊಳಿಸುವ ಸಂಬಂಧ ಈ ಬಾರಿ ಆನ್‌ಲೈನ್ ಜೊತೆಗೆ ಆಫ್‌ಲೈನ್‌ನಲ್ಲಿಯೂ ಸಹಾ ಮೌಲ್ಯಮಾಪನ ನಡೆಸಲು ಒಪ್ಪಲಾಯಿತು.**

******

**ಮಾನ್ಯ ಕುಲಪತಿಗಳು ಮುಂದೆ ಅಸಾಮಾನ್ಯ ಶೈಕ್ಷಣಿಕ ಸಭೆಯನ್ನು ಆಯೋಜಿಸುವಂತೆ ಸೂಚಿಸಿ ಸದರಿ ದಿನದ ಸಭೆಗೆ ಈ ದಿನದ ಸಭೆಯಲ್ಲಿ ಮುಂದೂಡಲಾಗಿರುವ ವಿಷಯಗಳನ್ನು ಪೂರ್ಣ ಮಾಹಿತಿ ಹಾಗೂ ವಿವರದೊಂದಿಗೆ ಮಂಡಿಸುವಂತೆ ತಿಳಿಸಿದರು.**

ಅಂತಿಮವಾಗಿ 60ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಗೆ ಆಗಮಿಸಿ, ಮಂಡಿತ ವಿಷಯದ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಸಚಿವರು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು